ಶ್ರೀ ಪಿ. ಹೆ. ಮುಕ್ಕಣ್ಣಪ್ಪ.—ನಾವು ಸಬ್‌ಜೆಕ್ಟನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಪ್ರಶ್ನೆ ಕೇಳುತ್ತೇವೆಂದು ಅಧ್ಯಕ್ಷರು ಹೇಳುತ್ತಾರೆ. ನಾವೂ ಸ್ವಲ್ಪ ಅರ್ಥ ಮಾಡಿಕೊಂಡೇ ಕೇಳುತ್ತಿದ್ದೇವೆ. ಈ ವಿಚಾರದಲ್ಲಿ ಶಾಸನ ಸಭಾ ಕಛೇರಿಯವರು ತಪ್ಪು ಮಾಡಿದ್ದಾರೆ. ಈಗ ಆ ತಪ್ಪನ್ನು ನಮ್ಮ ಮೇಲೆ ಹಾಕುತ್ತಿದ್ದಾರೆ. ಇಲ್ಲಿ presentation ಎಂತ ಹೇಳದೆ ಸುಮ್ಮನೆ 'financial' ಎಂತ ಹೇಳಿದ್ದಾರೆ. ಸರಿಯಾದ ಹೆಡ್ಡಿಂಗ್ ಕೊಟ್ಟಿಲ್ಲ.

Mr. SPEAKER.—I would like the member to read it carefully. The word used is "to present". Demands are not introduced but presented. There is nothing wrong.

THE MYSORE INDUSTRIAL ESTABLISHMENTS (NATIONAL AND FESTIVAL HOLIDAYS) BILL, 1962.

Motion to consider.

Sri D. DEVARAJ URS (Minister for Labour, Housing and Transport).—I beg to move:

> "That the Mysore Industrial Establishments (National and Festival Holidays) Bill, 1962, as passed by the Legislative Council, be taken into consideration."

Mr. SPEAKER.—Motion moved.

> "That the Mysore Industrial Establishments (National and Festival Holidays) Bill, 1962, as passed by the Legislative Council, be taken into consideration."

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ಮಸೂದೆ ಬಹಳ ದಿವಸಗಳ ಹಿಂದೆಯೇ ಇಲ್ಲಿ ಜಾರಿಗೆ ಬರಬೇಕಾಗಿತ್ತು. ಈ ಬಗ್ಗೆ ಒಂದು ಮಸೂದೆ ಬೇಗ ಜಾರಿಗೆ ಬರಲಿ ಎಂಬ ಒಂದು ಆಶೆ ಬಹಳ ದಿವಸಗಳಿಂದಲೂ ಕಾರ್ಮಿಕ ವರ್ಗಕ್ಕೂ ಇದೆ. ಸುಮಾರು 1957 ನೆಯ ಇಸ್ವಿಯ ಸುಮಾರಿನಲ್ಲೇ ಈ ವಿಚಾರ ಇಂಡಿಯಾ ಸರ್ಕಾರದ ಮಟ್ಟದಲ್ಲಿಯೂ ಮತ್ತು ಇದಕ್ಕೆ ಸಂಬಂಧಪಟ್ಟ ಸಂಸ್ಥಾನ ಸರ್ಕಾರಗಳ ಮಟ್ಟದಲ್ಲಿಯೂ ಈ ಬಗ್ಗೆ ಒಂದು ಕಾನೂನನ್ನು ಯಾವ ರೀತಿಯಲ್ಲಿ ತಯಾರಿಸಬೇಕು, ಯಾವ ರೀತಿ ಇದನ್ನು ಜಾರಿಗೆ ತರಬೇಕು, ಎನ್ನತಕ್ಕ ವಿಚಾರಗಳಲ್ಲಿ ಆಗಿಂದಾಗ್ಗೆ ಒಂದು ಒತ್ತಡ ಬರುತ್ತಲೇ ಇತ್ತು. ಈ ಒಂದು ಮಸೂದೆ ಎಲ್ಲ ಕಾರ್ಮಿಕ ವರ್ಗಗಳಿಗೂ ಒಂದೇ ವಿಧದಲ್ಲಿ ಅವರ ಹಿತರಕ್ಷಣೆ ಮಾಡತಕ್ಕ ಬಗ್ಗೆಯೂ ಮತ್ತು ಈ ಕಾನೂನು ಎಲ್ಲ ಭಾಗದಲ್ಲೂ ಒಂದೇ ರೀತಿಯಲ್ಲಿರಬೇಕು ಎಂಬ ಆಸೆ ಎಲ್ಲರಲ್ಲೂ ಇತ್ತು. ಅನೇಕ ಸಂದರ್ಭಗಳಲ್ಲಿ ಈ ಬಗ್ಗೆ ಟ್ರೈಪಾರ್ಟೈಟ್ ಕಾನ್ಫರೆನ್ಸುಗಳು ಸಭೆ ಸೇರಿ ಯಾವ ರೀತಿಯಲ್ಲಿ ಈ ಕಾನೂನು ಇರಬೇಕು ಎಂಬ ವಿಚಾರದಲ್ಲಿ ಒತ್ತಾಯ ಮಾಡಿ ಹೇಳಿದ್ದಾರೆ. ಈ ಕಾನೂನಿನ ಅಗತ್ಯವನ್ನು ಮನಗಂಡು ಕೇಂದ್ರ ಸರ್ಕಾರದವರು ಇದನ್ನು ಅವರು ಜಾರಿಗೆ ತರುವುದೇ ಅಥವಾ ರಾಜ್ಯ ಸರ್ಕಾರಗಳು ಅವರವರ ಒಡಂಬಡಿಕೆಗೆ ತಕ್ಕ ಹಾಗೆ ಆಯಾಯ ರಾಜ್ಯ ಈ ಸಬ್‌ಜೆಕ್ಟ್ ಸ್ಟೇಟ್ ಲಿಸ್ಟಿನಲ್ಲೂ ಸಹ ಇರುವುದರಿಂದ ರಾಜ್ಯ ಸರ್ಕಾರಗಳೂ ಸಹ ಈ ಕಾನೂನನ್ನು ತಾವೇ ರಚಿಸಿಕೊಳ್ಳಬಹುದೆಂದು ಕೇಂದ್ರ ಸರ್ಕಾರದವರಿತ್ತಿರುವ ಆದೇಶದ ಪ್ರಕಾರ ಈಗಾಗಲೇ ಕೆಲವು ರಾಜ್ಯ ಸರ್ಕಾರಗಳು ಈ ಕಾನೂನನ್ನು ರಚಿಸಿ ಅಲ್ಲಿ ಇದು ಜಾರಿಗೆ ಬಂದಿದೆ. ಇಂಥ ಒಂದು ಕಾನೂನು ನಮ್ಮ ರಾಜ್ಯದಲ್ಲೂ ಸಹ ಜಾರೀಲಿ ಇರಬೇಕೆಂಬ ಉದ್ದೇಶದಿಂದ ಈಗ ಈ ಮಸೂದೆಯನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

ನಮ್ಮ ದೇಶದಲ್ಲಿ ಈ ಕಾನೂನು ರಚನೆಯಾಗಬೇಕಾಗಿದ್ದರೆ ನಮ್ಮ ರಾಜ್ಯ ಮಟ್ಟದಲ್ಲಿರುವ ನ್ಯಾಯ ಪರಿಣತರ ಒಂದು ಸಮಿತಿಯವರಲ್ಲಿ ಈ ಕಾನೂನಿನ ಬಗ್ಗೆ ಸಾಕಾದಷ್ಟು ಚರ್ಚೆ ನಡೆದು ಈ ಕಾನೂನಿನ ರೂಪ ರೇಖೆಗಳು ಯಾವ ರೀತಿ ಇರಬೇಕು, ಇದನ್ನು ಹೇಗೆ ಜಾರಿಗೆ ತರಬೇಕು, ಈ ಕಾನೂನು ಮೂಲಕ ಯಾವ ಪ್ರಮಾಣದಲ್ಲಿ ಕಾರ್ಮಿಕರಿಗೆ ಸೌಲಭ್ಯಗಳು ದೊರೆಯುವಂತಾಗಬೇಕು, ಎಂಬ ವಿಚಾರಗಳೆಲ್ಲ ಚರ್ಚೆಯಾದುದರ ಪರಿಣಾಮವಾಗಿ ಈ ಬಗ್ಗೆ ಒಂದು ಸಬ್ ಕಮಿಟಿಯನ್ನು

ನೇಮಕ ಮಾಡಲಾಯಿತು. ಆ ಸಬ್ ಕಮಿಟಿಯವರು ಈ ವಿಚಾರಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ನಮ್ಮ ಮೈಸೂರು ರಾಜ್ಯದಲ್ಲಿ ಈ ಕಾರ್ಮಿಕರಿಗೆ ರಜಾದಿನಗಳನ್ನು ನಿಗದಿ ಮಾಡಲು ಇಂಡಿಯಾ ದೇಶದ ಬೇರೆ ಬೇರೆ ಭಾಗಗಳಲ್ಲಿ ಈ ವಿಚಾರದಲ್ಲಿ ಅವರು ಯಾವ ರೀತಿ ಮಾಡಿರುತ್ತಾರೆ, ಆ ಬೇರೆ ದೇಶಗಳವರು ಅಲ್ಲಿ ಈ ಕಾರ್ಮಿಕರಿಗೆ ರಜಾದಿನಗಳನ್ನು ಹೇಗೆ ಗೊತ್ತು ಮಾಡಿದ್ದಾರೆ, ಆ ರಜಾದಿನಗಳಲ್ಲಿ ಅವರಿಗೆ ವೇತನಗಳನ್ನು ಕೊಡಲು ಏನು ಪದ್ಧತಿ ಇಟ್ಟುಕೊಂಡಿದ್ದಾರೆ ಎಂಬ ವಿಚಾರಗಳನ್ನೆಲ್ಲ ಸಂಗ್ರಹಣೆ ಮಾಡಿ ಅವರು ಆ ಬಗ್ಗೆ ಒಂದು ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಆ ವರದಿಯನ್ನು ಸಲ್ಲಿಸಿದ್ದಾರೆ. ಆ ರಿಪೋರ್ಟಿನ ಆಧಾರದ ಮೇಲೆ ಎಲ್ಲ ಕಾರ್ಮಿಕ ಸಂಸ್ಥೆಯವರೂ ಕಾರ್ಮಿಕ ಮುಖಂಡರ ಒಪ್ಪಿಗೆಯನ್ನೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪಡೆದು ಈ ಮಸೂದೆ ರಚನೆಯಾಗಿದೆ. ಈಗ ಇಲ್ಲಿರತಕ್ಕ ಪರಿಸ್ಥಿತಿಯಾದರೂ ಏನು ಎಂದರೆ ಅನೇಕ ಕಾರ್ಖಾನೆಗಳಲ್ಲಿ, ಖಾಸಗಿ ಸಂಸ್ಥೆಯಾಗಲೀ, ಸರ್ಕಾರಿ ಸಂಸ್ಥೆಯಾಗಲಿ, ರಜಾದಿನಗಳನ್ನು ಗೊತ್ತುಮಾಡಿರತಕ್ಕದ್ದು ಒಂದೇ ಸಮನೆ ಇಲ್ಲ, uniformity ಇಲ್ಲ, ಒಂದೊಂದು ಕಡೆ ಒಂದೊಂದು ರೀತಿಯಾದ ಪದ್ಧತಿ ಜಾರಿಯಲ್ಲಿದೆ. ಒಂದು ಕಡೆ ಐದು ರಜಾದಿನಗಳಿದ್ದರೆ ಕೆಲವು ಕಡೆ ಸ್ವಲ್ಪ ಹೆಚ್ಚಾಗಿ ರಜಾದಿವಸಗಳನ್ನು ಗೊತ್ತುಮಾಡಿದ್ದಾರೆ. ಕೆಲವರು ವೇತನ ಸಹಿತ ರಜಾದಿವಸಗಳನ್ನು ಕೊಟ್ಟಿದ್ದರೆ, ಇನ್ನು ಕೆಲವು ಕಡೆ ವೇತನವಿಲ್ಲದೆ ರಜಾದಿನಗಳನ್ನು ಕೊಟ್ಟಿದ್ದಾರೆ. ಹೀಗೆ ನಾನಾ ರೀತಿಯಾಗಿ ಆಯಾ ಸಂಸ್ಥೆಗಳಿಗೆ ಸಂಬಂಧಪಟ್ಟ ಹಾಗೆ, ಮಾಲೀಕರಿಗೆ, ಕಾರ್ಮಿಕರಿಗೆ, ಉಂಟಾದಂಥ ಒಪ್ಪಂದದ ಪರಿಣಾಮವಾಗಿ ರಜಾದಿವಸಗಳು ಗೊತ್ತುಮಾಡಲ್ಪಟ್ಟಿವೆ. Republic Day ಮತ್ತು Independence Day, ಈ ಎರಡು ದಿವಸಗಳನ್ನೂ ರಾಷ್ಟ್ರೀಯ ರಜಾದಿವಸಗಳಾಗಿ ನಾವು ಗೊತ್ತುಮಾಡಬೇಕೆಂದು ಮಸೂದೆಯಲ್ಲಿದೆ. ಇದಕ್ಕೂ ಕಾರಣವೇನೆಂದರೆ, ಈಗ ಜಾರಿಯಲ್ಲಿರುವ ಪದ್ಧತಿಯಲ್ಲಿ ಸರ್ಕಾರ ರಜಾದಿವಸಗಳೆಂದು ಘೋಷಿಸಿ, ಆ ದಿವಸಗಳಲ್ಲಿ ಕಾರ್ಮಿಕರಿಗೆ ರಜ ಕೊಡುವುದರ ಜೊತೆಗೆ ಅವರಿಗೆ ವೇತನವನ್ನು ಸಹ ಕೊಡಬೇಕೆಂದು ಆಜ್ಞೆ ಹೊರಡಿಸಿದರೂ ಸಹ ಇದು ಖಾಸಗಿ ಸಂಸ್ಥೆಗಳ ಮೇಲೆ ಯಾವ ವಿಧವಾದ ಕಾನೂನು ರೀತ್ಯ binding ಅಲ್ಲ. ಕೆಲವು ಕಡೆ ಸರ್ಕಾರದ ಆಜ್ಞೆಯನ್ನನುಸರಿಸಿ ಕೆಲವು ಸಂಸ್ಥೆಗಳವರು ರಜ ಕೊಟ್ಟು ವೇತನವನ್ನೂ ಕೊಡುತ್ತಿದ್ದಾರೆ. ಇನ್ನು ಕೆಲವು ಕಡೆ ರಜ ಕೊಡುತ್ತಿದ್ದಾರೆ, ವೇತನವನ್ನು ಕೊಡುವುದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ರಜವನ್ನೂ ಕೊಡದೆ ಕೆಲಸ ಮಾಡಿಸತಕ್ಕ ಸನ್ನಿವೇಶಗಳು ಸರ್ಕಾರದ ಗಮನಕ್ಕೆ ಬಂದಿವೆ. ಸರ್ಕಾರದ ವತಿಯಿಂದ ನಡೆಯುತಕ್ಕ ಕೈಗಾರಿಕಾ ಸಂಸ್ಥೆಗಳಲ್ಲಿ ಮಾತ್ರ ಸರ್ಕಾರದ ಆಜ್ಞೆಯನ್ನನುಸರಿಸಿ ರಜಾದಿವಸಗಳನ್ನು ಗೊತ್ತುಮಾಡಿ ವೇತನಗಳನ್ನು ಕೊಡುತ್ತಾ ಬಂದಿದ್ದಾರೆ. ಎಲ್ಲ ಖಾಸಗೀ ಸಂಸ್ಥೆಗಳೂ ಇದನ್ನು ಅನುಸರಿಸುತ್ತಿರಲಿಲ್ಲ. ಇದರಲ್ಲಿ ಏಕರೂಪತೆ ಬರಬೇಕಾಗಿದ್ದರೆ, national holidays ಎಂದು ಸರ್ಕಾರದವರು ಗೊತ್ತುಮಾಡಿರುವುದನ್ನು ಎಲ್ಲರೂ ಅನುಸರಿಸಿ ವೇತನವನ್ನು ಕೊಡಬೇಕಾಗಿದ್ದರೆ ಅದಕ್ಕೆ ಕಾನೂನಿನ ಬಲ ಬೇಕು ಎನ್ನುವ ಅಭಿಪ್ರಾಯದಿಂದ ಈ ಕಾನೂನಿನಲ್ಲಿ ಏಳು ದಿವಸ ರಜಾದಿನಗಳನ್ನಾಗಿ ಘೋಷಿಸಿ ಅದರಲ್ಲಿ ಜನವರಿ 26 ಮತ್ತು ಆಗಸ್ಟ್ 15, ಈ ಎರಡು ದಿನಗಳನ್ನು national holidays ಎಂದು ಮಾಡಿ ಇನ್ನುಳಿಕೆಯ ಐದು ದಿನಗಳನ್ನು festival holidays ಎಂದರೆ ಹಬ್ಬದ ರಜಾದಿವಸಗಳೆಂದು ಗೊತ್ತು ಮಾಡಿದೆ. ರಾಷ್ಟ್ರೀಯ ರಜಾದಿನಗಳಲ್ಲಿ ಎಲ್ಲರೂ ರಜಾ ಕೊಡಲೇ ಬೇಕು ಮತ್ತು ಆ ದಿನಗಳಿಗೆ ವೇತನವನ್ನೂ ಕೊಡಬೇಕು. ಐದು ಹಬ್ಬದ ರಜದಿವಸಗಳಿಗೆ ಇಂಥಿಂಥ ದಿವಸಗಳೇ ಎಂದು ಮಸೂದೆಯಲ್ಲಿ ಗೊತ್ತುಮಾಡಿಲ್ಲ. ಆದರೆ ಒಂದು ವರ್ಷದಲ್ಲಿ ಐದು ದಿವಸ ರಜ ಕೊಟ್ಟೇ ಕೊಡಬೇಕು. ಯಾವ ಐದು ದಿವಸಗಳು ಈ ರಜ ಕೊಡಬೇಕೆನ್ನುವುದನ್ನು ಸಂಬಂಧಪಟ್ಟ ಸಂಸ್ಥೆಗಳಿಗೇ ಬಿಟ್ಟಿದೆ. ಮಾಲೀಕರೂ, ಕಾರ್ಮಿಕರೂ ಸೇರಿ ಅವರಿಗೆ ಯಾವ ಐದು ದಿವಸ ಅನುಕೂಲವಾಗುತ್ತದೆಯೋ ಅದನ್ನು ಗೊತ್ತುಮಾಡಿಕೊಳ್ಳಲು ಯಾವ ಅಭ್ಯಂತರವೂ ಇಲ್ಲದೆ ಸ್ವಾತಂತ್ರ್ಯ ಕೊಡುವುದು ಒಳ್ಳೆಯದೆಂದು ಇಂಥ ಐದು ದಿವಸಗಳಲ್ಲಿಯೇ ಹಬ್ಬದ ರಜ ಕೊಡಬೇಕೆಂದು ತಿಳಿಸಿಲ್ಲ. ಉದಾಹರಣೆಗೆ ಉಗಾದಿ ಹಬ್ಬವನ್ನು ಕೆಲವರು ಸೌರಮಾನ ರೀತಿಯಲ್ಲಿಯೂ ಆಚರಿಸುತ್ತಾರೆ. ಇದರ ಪ್ರಕಾರ ಒಂದೊಂದು ರೀತಿಯಿಂದ ಒಂದೊಂದು ದಿನ ರಜ ಕೊಡಬೇಕಾಗುತ್ತದೆ. ಆದ್ದರಿಂದ ಹಬ್ಬದ ರಜಾದಿನಗಳನ್ನು ಗೊತ್ತುಮಾಡುವುದನ್ನು ಆಯಾ ಸಂಸ್ಥೆಗಳ ಕಾರ್ಮಿಕರು ಮತ್ತು ಮಾಲೀಕರು ಇವರಿಗೆ ಬಿಡತಕ್ಕದ್ದು ಎಂದು. ಈ ಏಳು ದಿವಸಗಳಲ್ಲಿಯೂ ಕಡ್ಡಾಯವಾಗಿ ವೇತನವನ್ನು ಕಾರ್ಮಿಕರಿಗೆ ಎಲ್ಲ ಕಡೆಯೂ ಕೊಟ್ಟೇ ಕೊಡಬೇಕೆಂದು ಸೆಕ್ಷನ್ 5 ರಲ್ಲಿ ಅಳವಡಿಸಿದೆ.

ಒಂದುವೇಳೆ ಯಾವುದಾದರೂ ಒಂದು ವಿಶೇಷ ಸಂದರ್ಭಕ್ಕಾಗಿ ಕೈಗಾರಿಕೆಯ ಸಂಸ್ಥೆಯ ಮಾಲೀಕರು ಮತ್ತು, ಕಾರ್ಮಿಕರು ಸೇರಿ ರಜದಿವಸದಲ್ಲಿ ಕೆಲಸ ಮಾಡಬೇಕು ಎಂದರೆ ಅದಕ್ಕೆ ವೇತನವನ್ನು ಯಾವ ರೀತಿ ಪಡೆಯಬೇಕು ಎನ್ನುವುದನ್ನು ಕೂಡ ಇದರಲ್ಲಿ ನಮೂದಿಸಿದೆ. ಒಂದುವೇಳೆ ಇಬ್ಬರೂ ಒಪ್ಪಿ ರಜಾದಿವಸ ಕೆಲಸ ಮಾಡಿದ್ದೇ ಆದರೆ, double the wages ಕೊಡಬೇಕು ಎಂದು ಕೂಡ ಇದರಲ್ಲಿ ನಮೂದಾಗಿದೆ.

(ಶ್ರೀ ಡಿ. ದೇವರಾಜ್ ಅರಸ್)

ಈ ಕಾನೂನನ್ನು ಕೆಲವು ಸಂಸ್ಥೆಗಳಿಗೆ ಅನ್ವಯಿಸುವುದು ಸಾಧ್ಯವಾಗುವುದಿಲ್ಲ. ಆಯಾ ಸಂಸ್ಥೆಗಳ nature of work, ಕೆಲಸದ ವ್ಯಾಪ್ತಿ ಮತ್ತು ಅದರ ವೈಶಿಷ್ಟ್ಯದ ಮೇಲೆ ಅವಲಂಬಿಸುತ್ತದೆ. Road Transport Service ತೆಗೆದುಕೊಂಡರೆ ಅದನ್ನು ರಜ ದಿವಸವಾದರೂ ನಡೆಸಲೇಬೇಕಾಗುತ್ತದೆ. ಅಂಥಾ ಸಂದರ್ಭಗಳಲ್ಲಿ ಕಡ್ಡಾಯವಾಗಿ ರಜ ಕೊಡಲೇ ಬೇಕು ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅಂಥ ಸಂಸ್ಥೆಗಳಿಗೆ ವಿನಾಯಿತಿ ಕೊಡಲು ಈ ಬಿಲ್ಲಿನಲ್ಲಿ ಒಂದು ಕ್ಲಾಜ್ ಅಳವಡಿಸಲ್ಪಟ್ಟಿದೆ. ಯಾವುದಾದರೂ ವಿಶೇಷ ಸಂದರ್ಭದಲ್ಲಿ ಯಾವುದಾದರೂ ಒಂದು ಸಂಸ್ಥೆಗೆ ರಿಯಾಯಿತಿ ಕೊಡಬೇಕಾಗಿ ಬಂದರೆ ಆ ರೀತಿ ರಿಯಾಯಿತಿಯನ್ನು ಕೊಡಬಹುದು ಎಂದು ಕೂಡ ಕ್ಲಾಜ್ ಹತ್ತರಲ್ಲಿ ನಮೂದು ಮಾಡಿದೆ.

ಈ ಮಸೂದೆಯ definition clause ನಲ್ಲಿ 'industrial establishment' ಎಂದರೆ ಏನು ಎಂದು define ಮಾಡಿದೆ. ಇದರಲ್ಲಿ ಹೇಳಿರತಕ್ಕ establishments ಅಲ್ಲದೆ ಯಾವುದಾದರೂ ಸಂಸ್ಥೆಗಳು ಬಿಟ್ಟು ಹೋಗಿದ್ದ ಪಕ್ಷದಲ್ಲಿ ಅಂಥದ್ದನ್ನು ಕೂಡ define ಮಾಡಿ ಹೊಸದಾಗಿ notify ಮಾಡಬಹುದು ಎಂದು ಸರ್ಕಾರಕ್ಕೆ ಅಧಿಕಾರ ನೀಡುವ ಒಂದು ಸಬ್-ಕ್ಲಾಜ್ ಕೂಡ definition clause ನಲ್ಲಿ ಅಡಕವಾಗಿದೆ.

ಈ ಕಾನೂನನ್ನು ಜಾರಿಗೆ ತರಬೇಕಾದರೆ ಹೇಗೆ ಮಾಡಬೇಕು ಎನ್ನುವುದನ್ನು ಕೂಡ ನಮೂದು ಮಾಡಿ ಈಗ Factory and Shops and Establishments Inspectors ಆಗಿ ಇರುವವರೇ ಈ ಕಾನೂನನ್ನು ಜಾರಿಗೆ ಕೊಡಬಹುದು ಎಂದು ಅಧಿಕಾರವನ್ನು ಕೊಟ್ಟಿದೆ. ಅದಕ್ಕೆ ಕಾರಣವಿಷ್ಟೆ, ತಾವು Statement of Objects and Reasons ತೆಗೆದು ನೋಡುವುದಾದರೆ ಇದಕ್ಕಾಗಿ ಬೇರೆ ಸಿಬ್ಬಂದಿಯ ಅಗತ್ಯವಿಲ್ಲವಾದುದರಿಂದ, ಇದಕ್ಕಾಗಿ ನಾವು ಹೆಚ್ಚಿಗೆ ಹಣವನ್ನು ಖರ್ಚು ಮಾಡತಕ್ಕ ಪ್ರಮೇಯ ಒದಗಿಲ್ಲ. ಈಗ ಹಾಲಿ ಇರತಕ್ಕ inspectorate ಏನಿದೆ ಅವರೇ ಈ ಅಧಿಕಾರವನ್ನು ಚಲಾಯಿಸಬಹುದು ಎಂದು ಕೂಡ ಇದರಲ್ಲಿ ನಮೂದಾಗಿದೆ. ಇನ್ನೂ ಒಂದು ವಿಶೇಷವೇನೆಂದರೆ, ಹೀಗೆ ಈ ಕಾನೂನನ್ನು ಆಚರಣೆಗೆ ಕೊಡತಕ್ಕ ಕಾಲದಲ್ಲಿ ಖಾಸಗೀ ಎಸ್ಟಾಬ್ಲಿಷ್‌ಮೆಂಟಾಗಲೀ, ಮಾಲೀಕರೇ ಆಗಲೀ, ಯಾವುದೇ ರೀತಿಯಲ್ಲಿ ಅಡಿ ಪಡಿಸುವುದರ ಬಗ್ಗೆಯೂ ಇದರಲ್ಲಿ ನಮೂದು ಮಾಡಿ ಅದಕ್ಕೆ ಕಾನೂನು ರೀತ್ಯ ನೋಡಿಕೊಳ್ಳದೇಹೋದರೆ, ಅಡ್ಡಿಯನ್ನುಂಟು ಮಾಡಿದರೆ ಅವರಿಗೆ ಶಿಕ್ಷೆಯನ್ನು ಮಾಡಬಹುದು ಎನ್ನುವುದನ್ನು ಇಲ್ಲಿ ನಮೂದು ಮಾಡಲಾಗಿದೆ.

Mr. SPEAKER.—The House will now rise and meet after half an hour.

The House adjourned for recess at Ten of the Clock and re-assembled at Thirty Minutes past Ten of the Clock.

[Mr. SPEAKER in the Chair.]

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ಮಸೂದೆಯಲ್ಲಿರುವ ಕ್ಲಾಜು ೧೧ರಲ್ಲಿ ಹೇಳಿರುವಂತೆ ಈಗ ಅಲ್ಲಿರತಕ್ಕ ಒಪ್ಪಂದದ ಪ್ರಕಾರ ಯಾವುದೇ ಒಂದು ಸಂಸ್ಥೆಗೂ ಮತ್ತು ಕಾರ್ಮಿಕರಿಗೂ ಹಾಲಿಡೇಸ್ ಯಾವ ರೀತಿಯಿರಬೇಕು, ಎಷ್ಟಿರಬೇಕು ಎನ್ನುವುದು, ಯಾವ ರೀತಿಯಾಗಿ ಒಪ್ಪಂದವಾಗಿದ್ದರೂ ಅದಕ್ಕಿಂತಲೂ ಹೆಚ್ಚಿನ ರಕ್ಷಣೆ ಅಥವಾ ಹೆಚ್ಚಿನ ಅನುಕೂಲವಾಗುವ ರೀತಿಯಲ್ಲಿ ಇದ್ದ ಪಕ್ಷದಲ್ಲಿ ಆ ಒಪ್ಪಂದಕ್ಕೆ ಯಾವ ರೀತಿಯಲ್ಲಿಯೂ ಈ ಕಾನೂನು ಅಡ್ಡಿ ಬರುವುದಿಲ್ಲ ಎನ್ನುವುದನ್ನು ಈ ಕ್ಲಾಜು ೧೧ರಲ್ಲಿ ನಮೂದು ಮಾಡಿದೆ.

ಅನೇಕ ಕಡೆ ಇರುವ ಸ್ಟ್ಯಾಟಿಸ್ಟಿಕ್ಸ್ ನೋಡಿರುವಂತೆ ಕೆಲವು ಕೈಗಾರಿಕೆಗಳಲ್ಲಿ ಏಳು ದಿವಸಗಳಿಗಿಂತ ಹೆಚ್ಚಾಗಿ ರಜಾ ದಿವಸಗಳು ಕೆಲವು ಇವೆ. Paid Holidaysಗಳು ಹೆಚ್ಚಿಗೆ ಇರು

ವುದು ಇವೆ. ಆ ರೀತಿಯಿದ್ದ ಪಕ್ಷದಲ್ಲ ಈ ಕಾನೂನಲ್ಲಿರುವ ಏಳು ದಿವಸಗಳನ್ನು ಕಡಿಮೆ ಮಾಡು ವಂತೆ ಹೇಳುವುದಕ್ಕೆ ಬರುವುದಿಲ್ಲ. ಒಪ್ಪಂದದ ಪ್ರಕಾರ ಅನುಸರಿಸಿಕೊಂಡು ಏನು ಬಂದಿದ್ದಾರೆ. ಅದರಂತೆ ಹೆಚ್ಚಿನ ರಜಾ ದಿವಸಗಳನ್ನು ಒದಗಿಸುತ್ತಿಲ್ಲ ಎಂದು ಕಡಿಮೆ ಮಾಡಿಕೊಂಡು ಬಂದಿದ್ದಾರೆ ಎಂದು ಇದ್ದರೆ ಅದಕ್ಕೆ ರಕ್ಷಣೆ ಕೊಟ್ಟು ಆ ಒಪ್ಪಂದದಿಂದ ಕಾರ್ಮಿಕರಿಗೆ ಹೆಚ್ಚು ಅನುಕೂಲವಾಗಿದ್ದ ಪಕ್ಷದಲ್ಲಿ ಅದನ್ನೇ ಮುಂದುವರಿಸಬಹುದು ಎಂದು ಇನ್ನೊಂದು ಕಡೆ ಇದರಲ್ಲಿ ನಮೂದು ಮಾಡಿದೆ. ಏಳು ದಿವಸ ರಜ ದಿನಗಳಲ್ಲಿ ಏಳು ದಿವಸ ಸ್ವಲ್ಪ ಕಡಿಮೆ ಎನ್ನುವ ವಾದ ವಿವಾದ ಬರಬಹುದು. ಹೀಗೆ ಏಳು ದಿವಸಗಳಷ್ಟು ರಜಾ ಎಂದು ತೀರ್ಮಾನಕ್ಕೆ ಬರುವುದಕ್ಕೆ ಒಂದು ಹಿನ್ನೆಲೆ ಕೂಡ ಇದೆ. ನಾನು ಮೊದಲೇ ಅರಿಕೆ ಮಾಡಿಕೊಂಡ ಹಾಗೆ ನಾವು ನಮ್ಮ ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಮತ್ತು ಬೇರೆ ಪ್ರದೇಶಗಳಲ್ಲಿರತಕ್ಕ ಪದ್ಧತಿ ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ಮತ್ತು ಇದರ ಜೊತೆಗೆ ಎಲ್ಲ ಮುಖ್ಯವಾದ ಟ್ರೇಡ್ ಯೂನಿಯನ್ನು ಸಂಸ್ಥೆಗಳನ್ನು ನೋಡಿಕೊಂಡು ಒಟ್ಟಿನಲ್ಲಿ ಏಳು ದಿನಗಳು ರಜಾ ದಿನಗಳೆಂದು ಗೊತ್ತು ಮಾಡಲಾಗಿದೆ. ಹಾಗೇ ಎರಡು ದಿವಸಗಳನ್ನು ನ್ಯಾಷನಲ್ ಹಾಲಿಡೇಸ್ ಎಂದು ಮಾಡಿರತಕ್ಕದ್ದು. ನನ್ನ ಮಾತನ್ನು ಪುಷ್ಟೀಕರಿಸುವುದಕ್ಕೆ ಇಲ್ಲಿ ಕೆಲವು ಅಂಕಿ ಅಂಶಗಳನ್ನು ತಮ್ಮ ಮೂಲಕ ಈ ಮಾನ್ಯ ಸಭೆಯ ಗಮನಕ್ಕೆ ತಂದಿದೆ. ಅದು ಅನುಚಿತವಲ್ಲವೆಂದು ನಾನು ಭಾವಿಸುತ್ತೇನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಯಾವ ಒಂದು ಪದ್ಧತಿಯಿದೆ. ಅದರ ಕೆಲವು ಅಂಕಿ ಅಂಶಗಳನ್ನು ತಮಗೆ ತಿಳಿಸುತ್ತೇನೆ. ಪೆರು ಮತ್ತು ಚಿಲಿ ದೇಶಗಳಲ್ಲಿ Paid Holidays ಬಂದಿದೆ. ಗ್ರೀಸಿನಲ್ಲಿ ಮೂರು ದಿನಗಳಿವೆ ಕ್ಯೂಬಾದಲ್ಲಿ ನಾಲ್ಕು ದಿನಗಳಿವೆ ಸ್ವಿಟ್ಜರ್‌ಲೆಂಡಿನಲ್ಲಿ ನಾಲ್ಕರಿಂದ ಎಂಟು ದಿನಗಳಿವೆ. ಬ್ರೆಜಿಲ್, ಫ್ರಾನ್ಸ್ ಮತ್ತು ಮೆಕ್ಸಿಕೋ ದೇಶಗಳಲ್ಲಿ ಎರಡು ದಿನಗಳಿವೆ. ಯೂನಿಯನ್ ಆಫ್ ಸೌತ್ ಆಫ್ರಿಕಾದಲ್ಲಿ ಐದರಿಂದ ಆರು ದಿನಗಳಿವೆ. ಐರ್ಲೆಂಡು, ಯು. ಕೆ. ಮತ್ತು ಯು. ಎಸ್. ಎಸ್. ಆರ್. ನಲ್ಲಿ ಆರು ದಿನಗಳಿವೆ. ನೆದರ್‌ಲ್ಯಾಂಡ್ಸ್‌ನಲ್ಲಿ ಅದರಿಂದ ಹತ್ತು ದಿನಗಳಿವೆ, ಅರ್ಜೆಂಟೈನಾ, ಜೆಕೋಸ್ಲೋವಾಕಿಯದಲ್ಲಿ ಯು. ಎಸ್. ಎ. ನಲ್ಲಿ ಏಳು ದಿವಸಗಳಿವೆ. ಕೆನಾಡದಲ್ಲಿ ಏಳರಿಂದ ಒಂಭತ್ತು ದಿನಗಳಿವೆ ಗ್ವಾಟೆಮಾಲಾ, ಯುಗೋಸ್ಲೋವಿಯಾದಲ್ಲಿ ಎಂಟು ದಿನಗಳಿವೆ. ಡೆನ್‌ಮಾರ್ಕಿನಲ್ಲಿ ಎಂಟರಿಂದ ಒಂಭತ್ತು ದಿನಗಳಿವೆ. ನ್ಯೂಜಿಲೆಂಡು, ವೆನಿಜುಲಾದಲ್ಲಿ ಒಂಭತ್ತು ದಿನಗಳಿವೆ. ಅರ್ಜೆಂಟೈನಾದಲ್ಲಿ ಒಂಭತ್ತರಿಂದ ಹನ್ನೆರಡು ದಿನಗಳಿವೆ. ಬೆಲ್ಜಿಯಂ, ನಾರ್ವೆ, ಪೋಲೆಂಡು ಈ ದೇಶಗಳಲ್ಲಿ ಏಳರಿಂದ ಹತ್ತು ದಿನಗಳಿವೆ. ಫಿನ್‌ಲೆಂಡಿನಲ್ಲಿ ಹತ್ತರಿಂದ ಹದಿಮೂರು ದಿನಗಳಿವೆ. ಸ್ವೀಡನ್ನಿನಲ್ಲಿ ಹನ್ನೊಂದು ದಿನಗಳಿವೆ. ಟರ್ಕಿಯಲ್ಲಿ ಹನ್ನೆರಡು ದಿನಗಳಿವೆ. ಆಸ್ಟ್ರೇಲಿಯದಲ್ಲಿ ಹನ್ನೆರಡರಿಂದ ಹದಿಮೂರು ದಿನಗಳಿವೆ. ಇಂಡೋನೇಷಿಯಾದಲ್ಲಿ ಹನ್ನೆರಡರಿಂದ ಹದಿನೈದು ದಿನಗಳಿವೆ. ಇಟಲಿಯಲ್ಲಿ ಹದಿನಾರು ದಿನಗಳಿವೆ. ಕೊಲಂಬಿಯದಲ್ಲಿ ಹದಿನೇಳು ದಿನಗಳಿವೆ. ಹೀಗೆಲ್ಲಾ ಇದೆ. ನಮ್ಮ ಮೈಸೂರು ಸಂಸ್ಥಾನದಲ್ಲೂ ನಾನಾಗಲೇ ಅರಿಕೆ ಮಾಡಿಕೊಂಡ ಹಾಗೆ ರಜಾ ದಿವಸಗಳನ್ನು ಮಾಡಿರುವುದರಲ್ಲೂ ಹೆಚ್ಚು ವ್ಯತ್ಯಾಸಗಳಿವೆ. ಆದರೂ ಕೂಡ ಮುಖ್ಯ ಮುಖ್ಯವಾದ ಕೈಗಾರಿಕಾ ಸಂಸ್ಥೆಗಳಲ್ಲಿ ಯಾವ ರೀತಿ ರಜಾ ದಿನಗಳು ಆಚರಣೆಯಲ್ಲಿವೆಯೋ ಅವರ ಒಪ್ಪಂದದ ಪ್ರಕಾರ ಸಂಸ್ಥಾನಾ ಮಳೆ ಹೀಗಿರುವುದು. ಒಳ್ಳೆಯದು ಎಂದು ನಾವು ಇತರ ದೇಶಗಳ ಅಂಕಿ ಅಂಶಗಳನ್ನು ನೋಡಿರುವಂತೆ ಒಪ್ಪಬೇಕಾದುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಇದನ್ನು ಗಮನಕ್ಕೆ ತೆಗೆದುಕೊಂಡು ಏಳು ದಿವಸ ರಜ ಗೊತ್ತು ಮಾಡಿರತಕ್ಕಂಥಾದ್ದು ಇನ್ನು ಎರಡು ದಿವಸ ರಾಷ್ಟ್ರೀಯ ರಜ ದಿವಸ ಎಂದು ಏಕೆ ಗೊತ್ತು ಮಾಡಲಿಲ್ಲ ಎಂಬ ವಿಷಯ ಅದೆ. ಒಂದು 'ಗಾಂಧೀ ಜಯಂತಿ' ದಿನ ಇನ್ನೊಂದು 'ಮೇ ಡೇ' ಈ ಎರಡು ದಿವಸಗಳನ್ನು ರಾಷ್ಟ್ರೀಯ ರಜ ದಿನ ಎಂದು ಗೊತ್ತು ಮಾಡಬಹುದಾಗಿತ್ತು ಎನ್ನತಕ್ಕಂಥ ವಿಚಾರ ಇದೆ. ಗಾಂಧೀ ಜಯಂತಿಯ ಬಗ್ಗೆ ಲೇಬರ್ ಅಡ್ವೈಸರಿ ಕಮಿಟಿಯಿಂದಾಗಲಿ, ಆಲ್ ಇಂಡಿಯಾ ಕಾನ್‌ಫರನ್ಸಿನಿಂದ ಆಗಲಿ ಈ ಬಗ್ಗೆ ಸೂಚನೆ ಮಾಡತಕ್ಕ ಸಲಹೆ ಬಂದಿಲ್ಲ. ಬಹುಶಃ ಕಾರ್ಮಿಕರ ಮುಖಂಡರಿಗೆ ಟ್ರೇಡ್ ಯೂನಿಯನ್ ಅವರ ಬಗ್ಗೆ ಭಿನ್ನಾಭಿಪ್ರಾಯವಿಟ್ಟುಕೊಂಡು ಒತ್ತಾಯ ಮಾಡುವುದು ಸರಿಯಲ್ಲ. ಒಂದು ವೇಳೆ ಕಾರ್ಮಿಕರ ಸಂಸ್ಥೆಯವರು ಗಾಂಧೀ ಜಯಂತಿ ರಜ ದಿನ ಎಂದು ಗೊತ್ತು ಮಾಡಬೇಕೆಂದು ಹೇಳಿದರೆ ಐದು ಫೆಸ್ಟಿವಲ್ ಹಾಲಿಡೇಜನಲ್ಲಿ ಗೊತ್ತು ಮಾಡಿಕೊಳ್ಳುವದರಲ್ಲಿ ಯಾವ ಅಡ್ಡಿಯಿಲ್ಲ, ಮೇ ಡೇ ಬಗ್ಗೆ ಕೇರಳ ರಾಜ್ಯ ಬಿಟ್ಟು ಯಾರೂ ಆ ದಿನವನ್ನು ರಾಷ್ಟ್ರೀಯ ರಜಾ ದಿನ ಎಂದು ಗೊತ್ತು ಮಾಡಿಲ್ಲ, ಮದ್ರಾಸ್ ಕಾನೂನಿನಲ್ಲಿ ಎರಡು ದಿವಸ ರಾಷ್ಟ್ರೀಯ ರಜಾ ದಿನ ಎಂದು ಕಾನೂನಿನಲ್ಲಿ ಅಡಕ ಮಾಡಿದ್ದಾರೆ. ಮೇ ಡೇ ಸೇರಿಸಿದ್ದಾರೆ. ಎಲ್ಲ ಕಡೆ ಮೇ ಡೇ ರಾಷ್ಟ್ರೀಯ ರಜಾ ದಿನ ಎಂದು ಒತ್ತಾಯ ಪೂರ್ವಕವಾಗಿ ಅಡಕ ಮಾಡಬೇಕೆಂದು ಕಾರ್ಮಿಕರು ಕೇಳಿದರೆ ಬಹು ಜನ ಕಾರ್ಮಿಕರ ಅಭಿಪ್ರಾಯ ಆ ರೀತಿಯಾದರೆ ಮತ್ತು ಹಾಗೆ ಇಷ್ಟಪಟ್ಟರೆ ಆ ರೀತಿ ಮಾಡಿಕೊಳ್ಳಲು ಯಾವ ಅಡ್ಡಿಯಿಲ್ಲ ಎಂದು ಸಭೆಯ ಗಮನಕ್ಕೆ ತರುತ್ತೇನೆ.

(ಶ್ರೀ ಡಿ. ದೇವರಾಜ ಅರಸ್)

ಸಣ್ಣ ಪುಟ್ಟ ಒಂದೆರಡು ವಿಚಾರಗಳನ್ನು ಬಿಟ್ಟರೆ ಈ ಕಾನೂನು ಮತ್ತು ಮದ್ರಾಸ್ ಕೇರಳ ರಾಜ್ಯದಲ್ಲಿರತಕ್ಕ ಕಾನೂನು ಎಲ್ಲ ರೀತಿಯಲ್ಲಿ ಒಂದೇ ಆಗಿದೆ. ಬದಲಾವಣೆ ಮಾಡಿರತಕ್ಕಂಥಾದ್ದು ಎಕ್ಸೆಂಪ್ಷನ್ ಕ್ಲಾಜಿನಲ್ಲಿದೆ. ಕೆಲವು ಸಂಸ್ಥೆಗಳನ್ನು ಕಾನೂನಿನಲ್ಲಿ ಸೇರಿಸಿದ್ದೇವೆ. ಎಗ್ಸೆಂಪ್ಷನ್ ಇರಲೇಬೇಕೆಂದು ಅದನ್ನು ಕಾನೂನಿನಲ್ಲಿ ಗುರುತು ಮಾಡತಕ್ಕ ಅಗತ್ಯವಿಲ್ಲ. ಒಟ್ಟು ಸರಕಾರಕ್ಕೆ ಅಧಿಕಾರ ಇಟ್ಟುಕೊಂಡು, ಯಾವದೇ ಎಸ್ಟಾಬ್ಲಿಷ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಈ ಕಾನೂನು ಜಾರಿ ಮಾಡುವುದು ಸರಿಯಲ್ಲ, ತೊಂದರೆಯಾದೀತು ಎಂದು ಸಾಕಷ್ಟು ಆಧಾರವಿದ್ದರೆ ಸರಕಾರ ಅಂಥವುಗಳಿಗೆ ಎಗ್ಸೆಂಪ್ಷನ್ ಕೊಟ್ಟರೆ ಸಾಕು. ಮದ್ರಾಸ್ ಕಾನೂನಿನಲ್ಲಿರತಕ್ಕ ಎಗ್ಸೆಂಪ್ಷನ್ ಈ ಕಾನೂನಿನಲ್ಲಿ ಕೈಬಿಟ್ಟಿದ್ದೇವೆ. ಈ ಮಸೂದೆಯು ಒಂದು ವಿಹಂಗಮ ಚಿತ್ರವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಎಲ್ಲ ಕಾರ್ಮಿಕರ ಹಿತಸಾಧನೆ ಮಾಡತಕ್ಕಂಥಾದ್ದಾಗಿದೆ. ಎಲ್ಲ ಕಾರ್ಮಿಕರು ಏಕ ರೀತ್ಯಾ ಒಂದು ತೀರ್ಮಾನಕ್ಕೆ ಬಂದು ಅವರೆಲ್ಲರಿಗೂ ಏಕಕಾಲಕ್ಕೆ ರಜ ಯೋಚಿಸಿಕೊಳ್ಳುವದಕ್ಕೆ ಬರುವ ಹಾಗೆ, ಹೆಚ್ಚು ವಿವಾದವಿಲ್ಲದೆ ಅವರ ಹಕ್ಕು ಭಾಧ್ಯತೆಗಳನ್ನು ರಕ್ಷಿಸುವುದಕ್ಕೆ ಈ ಕಾನೂನಿನಲ್ಲಿ ಅವಕಾಶವಿದೆ. ಆದುದರಿಂದ ಈ ಮಸೂದೆಯನ್ನು ಈ ಸಭೆ ಸಂಪೂರ್ಣವಾಗಿ ಅದು ಮೋದಿಸುತ್ತದೆಂದು ನಾನು ಭಾವಿಸುತ್ತೇನೆ.

Sri SANJEEVANATH AIKALA (Suratkal).–Mr. Speaker, Sir, I welcome this measure. When I was working in the trade union movement a few years ago, we were fighting for this declaration of festival holidays with payment of wages to the workers. Unfortunately in those days the workers' grievances were not heard and their legitimate demands were not met. Fortunately, the Hon'ble Labour Minister has come forward with this Bill and he has declared seven national festival holidays with the payment of wages. Wages as per the definition here includes the payment of D.A. and other remuneration.

There is a dispute regarding the word 'wages'. as to whether the term includes D.A. and other subsidiary allowances. The matter has been made clear and yet there will be the danger of arguments between the employers and employees regarding the definition of this term 'wages' when the payment is actually made to the workers. I therefore say that the particular point must be made clear as to the definition of wages.

Sir, seven holidays have been declared as national and festival holidays. The Hon'ble Minister also gave his resons for not declaring May 1st as a national holiday. He says that there is no unanimity as to the observance of this MAY DAY as a holiday among the trade union workers. Sir, as far as I khow, it was not so. There was an insistant demand and also it was a regular point of dispute in many of the trade unions that MAY DAY should be declared as a national holiday because it is not merely a national holiday but it is an international holiday. In many countries they have declared MAY 1st as a national holiday, with not only the usual payment, but twice the usual payment has been required to be paid to the workers. This is prevailing in most of the countries. So, I do not concur with the Hon'ble Minister when he says that the trade union leaders were not unanimous on this point. May 1st is certainly one of the most important days as far as the labour history is concerned, and it should be declared as national holiday in our country too. So, I say that amongt hese seven national holidays now proposed to be declared, May 1st also should be included.

In addition to this Sir, the International Labour Organisation has declared that all over the countries the UNO Day should also be declared as a holiday. It is being observed throughout the length and breadth of the world. Novr. 11 was observed as UNO Day and the employees also should have the pleasure of observing this day as UNO Day and hence November 11th should be declared as a national holiday.

Further, I wish to touch a point about which the Hon'ble Minister has spoken, that is, the declaration of October 2nd as a Holiday that being Gandhi Jayanthi. I need not say that Gandhiji was the greatest leader of our country, who brought us freedom and who, by his noble ideals, shown us a way of life. So, it is in the fitness of things that Gandhi Jayanthi should be observed as a national holiday and this also should be included. So, consequently, there should be two international holidays, three national holidays in addition to the five festival holidays. Thus the total number of holidays to the workers comes to ten; all this should be with complete payment of wages and other remunerations.

Sir, in the matter of declaring holidays and payment of wages for those days to the workers, the Government Undertakings are the greatest defaulters. From my experience, is what I have observed.

Sri D. DEVARAJ URS.—Sir, I do not want the Hon'ble Member to make a sweeping statement like this. If there are any individual instances, let him state. As far as my knowledge goes, it is mostly the Government Undertakings that observe this. If he gives me any particular instance, I will look into it.

Sri SANJEEVANATH AIKALA.—Sir, matters might have improved now, but that was the case a few months back. Government must understand the demands of the workers as well as the members from this side and if they do not meet the legitimte demands, Government is not worth the name. It was my experience some time back that the Government of Mysore and the erstwhile Madras Government were the worst defaulters so far as my district is concerned in not implementing the rules they themselves framed. In the Electric Establishment in my district which was taken over by the then Madras Government, they did not observe many of the rules which were being observed by the private concerns.

Sri D. DEVARAJ URS.—That is before 1956.

Sri SANJEEVANATH AIKALA.—Yes. So far as Mysore Government Undertakings were concerned, the same conditions prevailed. Anyhow, the Hon'ble Labour Minister assures that Government would not commit this fault. I am sure the labourers would be reassured by this promise.

The other point which I would like to touch is, many of the establishments which say that they employ only casual labourers deny all the benefits to those employees. In my district there are so many establishments which do not keep all the records as required by the various Acts on the ground that their work is of a temporary nature and they employ only casual labourers. The Management find it very convenient to employ the contractors to get their work done. Secondly, they get many advantages which the industrial establishment could not get. For instance,

(SRI SANJEEVANATH AIKALA)

there are several beedi factories in South Kanara district and they get beedies manufactured by contractord. Formerly, these workers were working in the factories and they were getting all the privileges. Now they are denied of all the legitimate demands by the contractors. There are many such establishments. On the pretext of giving on contracts, they deny the workers, their legitimate demands. So, I request the Labour Minister to see that such things do not occur. The Labour Inspectors who are required to see to the correct implementation of these provisions are not strong people and they are always amenable to small gratifications. That is one danger which I want to point out here. With these words I welcome this Bill and once again request the Hon'ble Minister to add three more days to the list of seven holidays, now provided in the Bill.

Mr. SPEAKER.—Is Sri Muckannappa participating in the debate ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಇಲ್ಲ. ತಮ್ಮ ಅಪ್ಪಣೆ ಪಡೆದು ಬಹಳ ಅತಿ ಮುಖ್ಯವಾದಂಥ ಒಂದು ವಿಷಯವನ್ನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಇವತ್ತೇ ಗಮನಕ್ಕೆ ತರಬೇಕು. ಸೋಮವಾರ ತರುವುದಕ್ಕೆ ಸಾಧ್ಯವಿಲ್ಲವಾಗಿದೆ. ಅಪ್ಪಣೆ ಕೊಡುವುದಾದರೆ ಹೇಳುತ್ತೇನೆ. 1-4-63ನೇ ಸೋಮವಾರ ಪರೀಕ್ಷೆಗೆ ಬರುವಂಥ ಪ್ರಶ್ನೆಗಳು ಈಗತಾನೇ ಕರಗತವಾಗಿವೆ.

Mr. SPEAKER.—Does it relate to the Public Examinations ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೌದು. 1-4-63 ನೇ ತಾರೀಖು 11 ಘಂಟೆಗೆ ಪ್ರಾರಂಭವಾಗತಕ್ಕ ಪರೀಕ್ಷೆಯ ಪ್ರಶ್ನೆಗಳು ಈಗ ಹೊರಬಿದ್ದಿವೆ. ಅದಕ್ಕೋಸ್ಕರ ತಮ್ಮ ಮುಖಾಂತರ ಸರ್ಕಾರಕ್ಕೆ ಅವುಗಳನ್ನು ಒಪ್ಪಿಸುತ್ತೇನೆ. ಇದರಲ್ಲಿ ಏನು ತಪ್ಪು ನಡೆದಿದೆ ಎಂದು ವಿಚಾರಣೆ ನಡೆಸಿ ಈ ಸಭೆಗೆ ವರದಿ ಮಾಡುವುದಕ್ಕೆ ತಾವು ಸರ್ಕಾರಕ್ಕೆ ಒಂದು ಆದೇಶ ಕೊಡಬೇಕು. ಸರ್ಕಾರ ಇದರ ಬಗ್ಗೆ ಯಾವ ರೀತಿ ಮಾಡುತ್ತಾರೋ ಗೊತ್ತಿಲ್ಲ. ಇದು ಬಹಳ ಚಿಂತಾಜನಕವಾದುದು ; ಈ ದೇಶದಲ್ಲಿ ಕಳವಳವನ್ನು ಉಂಟುಮಾಡತಕ್ಕಂಥಾದ್ದು.

Mr. SPEAKER.—To which date they refer to ?

Sri C. J. MUCKANNAPPA.—These subjects are coming up for examination on 1st April 1963. Tomorrow there is no meeting ತಮ್ಮ ಗಮನಕ್ಕೆ ಇನ್ನೊಂದು ಪ್ರಾಮುಖ್ಯವಾದ ವಿಷಯವನ್ನು ತರಬೇಕಾಗಿದೆ. ಪೋಲೀಸು ಸ್ಪೆಷಲ್ ಬ್ರಾಂಚಿನಲ್ಲಿ ಟೈಪ್ ಮಾಡಿದಂಥ ನೂರಾರು ಪ್ರಶ್ನೆ ಪತ್ರಿಕೆಗಳು ಮಾರಾಟವಾಗುತ್ತಿವೆ. ಅವಕ್ಕೆ ನನ್ನ ಹತ್ತಿರ ರುಜುವಾತಿದೆ. ಸರ್ಕಾರ ವಿಚಾರಣೆ ನಡೆಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಅದನ್ನು ನಿಲ್ಲಿಸಬಲ್ಲ ಸರ್ಕಾರ ಎಲ್ಲಿದೆ? ಅದನ್ನು ತಿಳಿದುಕೊಂಡೂ ಹೇಳುತ್ತಿದ್ದೀರಾ ?

11-00 A.M.

ಸ್ವಾಮಿ, ಮಾನ್ಯ ಕಾರ್ಮಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ಈ ಔದ್ಯೋಗಿಕ ಸಂಸ್ಥೆಗಳ ರಾಷ್ಟ್ರೀಯ ರಜಾ ದಿನಗಳ ಮಸೂದೆಯ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನು ನಾನು ಕೊಡಬೇಕೆಂದು ಇದ್ದೇನೆ. ಈ ಮಸೂದೆ ಈಗಾಗಲೇ ಮೇಲ್ ಮನೆಯಲ್ಲಿ ಅಂಗೀಕೃತವಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಏನೂ ಹೇಳಬೇಕಾದ್ದು ಇಲ್ಲ. ಮೇಲ್‌ಮನೆ ಅನಾವಶ್ಯಕ ಎಂದು ಹೇಳಬಹುದು, ಇಲ್ಲಿ ಅಪ್ರಕೃತವಾದರೂ ಮೇಲ್‌ಮನೆಗೆ ಅಗೌರವ ಮಾಡುತ್ತೇನೆ ಎಂದು ಅಲ್ಲ ಮೇಲ್‌ಮನೆಯ ಅವಶ್ಯಕತೆ ಇಲ್ಲ ಎಂದು ಮಾತ್ರ ಹೇಳುತ್ತೇನೆ. ನಮ್ಮ ಸಂಜೀವನಾಥ್‌ರವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಮಾನ್ಯ ಮಂತ್ರಿಗಳ ಮಾತನ್ನು

ನಂಬುತ್ತೇನೆ. ಯಾವ ವಿಷಯದಲ್ಲಿ ಎಂದರೆ, ಕಾರ್ಮಿಕ ಸಂಘಗಳು ನಡೆಸಿದಂಥಾ ಟ್ರೈಪಾರ್ಟೈಟ್ ಸಮ್ಮೇಳನಗಳಲ್ಲಿ 'ಮೇ ದಿನಾಚರಣೆ' ಒಂದು ರಾಷ್ಟ್ರೀಯ ಹಬ್ಬವಾಗಿರಬೇಕೆನ್ನುವುದನ್ನು ಅವರು ಯಾರೂ ಒತ್ತಾಯ ಪಡಿಸಲಿಲ್ಲ ಅಂತ. ಹಾಗೆ ಅವರು ಒತ್ತಾಯ ಪಡಿಸದಿದ್ದರೆ ಮತ್ತು ಇದರಲ್ಲಿ ಅವರಿಗೆ ಯುನಾನಿಮಿಟಿ ಇಲ್ಲದೇ ಹೋದರೆ ಅದು ಬಹಳ ಶೋಚನೀಯವಾದ ವಿಷಯ. ಮತ್ತು ಈ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಾ ಇರತಕ್ಕ ಕಾರ್ಮಿಕ ಸಂಘಗಳ ದುರವಸ್ಥೆ, ದುಸ್ಥಿತಿ ಎಷ್ಟು ಹೀನಾಯವಾಗಿ ಬಿದ್ದು ಹೋಗಿದೆ ಎನ್ನುವುದಕ್ಕೆ ಇದು ಒಂದು ದೊಡ್ಡ ಸಾಕ್ಷಿ. ಬಹುಶಃ ಚಿಲಿಯಲ್ಲಿ ಕೂಡ 'ಮೇ ದಿನ' ಒಂದು ರಜಾ ದಿವಸ ಎಂದು ತಿಳಿದುಕೊಂಡಿದ್ದೇನೆ. ನನಗೆ ಅಷ್ಟಾಗಿ ಗೊತ್ತಿಲ್ಲ, ಚಿಲಿಗೆ ನಾನು ಹೋಗಿಲ್ಲ. 'ಮೇ ದಿನಾಚರಣೆ' ಕಾರ್ಮಿಕರಿಗೆ ಜಗತ್ತಿನಲ್ಲಿಯೇ ಅತ್ಯಂತ ಮಹತ್ವದ ದಿನ. ಬಹುಶಃ ಇದಕ್ಕಿಂತ ಮಹತ್ವದ ದಿನ ಕಾರ್ಮಿಕರಿಗೆ ಮತ್ತೊಂದು ಇಲ್ಲ ಎಂದು ಹೇಳಿ ಈಗಾಗಲೇ ವಿಶ್ವವ್ಯಾಪಿ ಒಪ್ಪಿಕೊಳ್ಳಲಾಗಿದೆ. ಮತ್ತು ಬಹು ರಾಷ್ಟ್ರಗಳಲ್ಲಿ, ಮುಂದುವರಿದ ರಾಷ್ಟ್ರಗಳಲ್ಲಿ ಅಥವಾ ಈಗತಾನೆ ಕೈಗಾರಿಕೋದ್ಯಮಗಳಲ್ಲಿ ಮೇಲೆ ಬರುತ್ತಾ, ಪ್ರಾರಂಭ ಮಾಡುತ್ತಾ ಇರುವ ರಾಷ್ಟ್ರದಲ್ಲೂ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಆದರೆ ದುರಾದೃಷ್ಟ, ನಮ್ಮ ದೇಶದಲ್ಲಿರತಕ್ಕ ಐ. ಎನ್. ಟಿ. ಯು. ಸಿ., ಎ. ಐ. ಎನ್. ಟಿ. ಯು. ಸಿ., ಎಚ್. ಎಂ. ಎಸ್. ಇವು ಕೇಂದ್ರ ಸರ್ಕಾರದ ಬಲ ಜೋಬು, ಎಡ ಜೋಬು ಮತ್ತು ಮುಂದುಗಡೆ ಕುಳಿತುಕೊಳ್ಳುವ ಸಂಸ್ಥೆಗಳಾಗಿವೆ. ಕಾರ್ಮಿಕರ ಹಿತವನ್ನು ಇವು ಲಕ್ಷ್ಯಮಾಡಿ ಅವರ ಹಿತವನ್ನು ಕಾಪಾಡುವುದಕ್ಕಿಂತ ಹೆಚ್ಚಾಗಿ ತಮ್ಮ ಅಸ್ತಿತ್ವ, ಮುಖಂಡರ ಘನತೆ, ಗೌರವ ತಮ್ಮಲ್ಲೇ ಭಿನ್ನಾಭಿಪ್ರಾಯ ತೋರುವಂಥಾ ಸಂಸ್ಥೆಗಳಾಗಿರುವುದು, ಈ ದೇಶದ ಕಾರ್ಮಿಕರ ದೌರ್ಭಾಗ್ಯವೆಂದು ಹೇಳಬೇಕಾಗಿದೆ. ಇದಕ್ಕೆ ಇನ್ನೂ ಒಂದು ಕಾರಣ ಹೇಳಬಹುದು. ಒಂದು ಕಡೆಯಿಂದ ಅನೀತಿ ಹುಟ್ಟಿದರೆ ಅದು ಎಲ್ಲಾ ಕಡೆಗೂ ಹಬ್ಬಿ ವ್ಯಾಪಿಸುತ್ತದೆ, ವಿಷದ ಗಾಳಿ ಇದ್ದ ಹಾಗೆ. ಮೊದಲು ಎಲ್ಲಿ ಪ್ರಾರಂಭವಾಯಿತು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮೊದಲೇ ಹೇಳಿದ್ದೆ. ಮಾನ್ಯ ಮಂತ್ರಿಗಳು ಏನು ಸಭೆಯ ಮುಂದೆ ಹೇಳಿದರು ಆ ಮಾತನ್ನು ನಂಬಿ ಪ್ರಮಾಣವಾಗಿಟ್ಟುಕೊಂಡು ಈ ಸಂಸ್ಥೆಗಳನ್ನು ಇಷ್ಟು ಕಟುವಾಗಿ ಖಂಡಿಸುತ್ತಾ ಇದ್ದೇನೆ. ಇಷ್ಟು ಹೇಳಿದ ಮೇಲೆ ನಾನು ತಿದ್ದುಪಡಿ ಸೂಚನೆ ಮಾಡಿಲ್ಲ. ಕಾರ್ಮಿಕರಿಗೆ ಸಂಬಂಧಪಟ್ಟ ರಜಾ ದಿನಗಳನ್ನು ಘೋಷಣೆ ಮಾಡತಕ್ಕ ಮಸೂದೆ ಈಗಿರುವುದರಿಂದ ಮೇ ದಿನಾಚರಣೆಗೆ ಪ್ರಥಮ ಸ್ಥಾನ ಸಲ್ಲಬೇಕಾಗಿದೆ. ಸಂಜೀವನಾಥ್ ಅವರು ಅಂತರಾಷ್ಟ್ರೀಯ ದಿನ ಎರಡು ಇರಲಿ ಎಂದು ಹೇಳಿದರು. ಮೇ ದಿನ-ಮೊದಲನೆ ದಿನ, ಸಂಬಳ ಕೊಟ್ಟು, ರಜಾ ಕೊಡತಕ್ಕ ದಿನವಾಗಬೇಕು. ಇದನ್ನು ಅವರು ಕಡ್ಡಾಯ ಮಾಡಿದರೆ ಒಳ್ಳೆಯದು. ಚಿಲೀಗಿಂತ ಒಂದು ದಿವಸ ಜಾಸ್ತಿ ಕೊಟ್ಟಿದ್ದೇವೆ, 7 ದಿವಸ ರಜಾ ಇದೆ ಎಂದು ಹೇಳಿದ್ದೀರಿ. ಎರಡು ದಿವಸಗಳನ್ನು ಬಿಟ್ಟರೆ, ಇನ್ನು 5 ದಿವಸಗಳು ಕಡ್ಡಾಯದ ದಿನಗಳು ಎಂದು ಅರ್ಥವಾಗುವುದಿಲ್ಲ; ಇದರಲ್ಲಿ ಅನುಮಾನವಿದೆ.

ಶ್ರೀ ಡಿ. ದೇವರಾಜ ಅರಸ್.—7 ದಿವಸದಲ್ಲಿ 2 ದಿವಸ ಇಂಥ ದಿವಸವೇ ರಜಾ ದಿನ ಅಂತ ಕಡ್ಡಾಯ ಇದೆ. ಇನ್ನು 5 ದಿವಸ ಇಂತಿಂಥ ದಿವಸ ಅಂತ ನಿರ್ಧಾರವಾಗಿಲ್ಲ. ಒಟ್ಟಿನಲ್ಲಿ 2 ಮತ್ತು 5, 7 ದಿನ ರಜಾ ಕೊಡಬೇಕು. ಯಾವತ್ತು ಕೊಡಬೇಕೆನ್ನುವುದು ಸಂಬಂಧಪಟ್ಟ ಸಂಸ್ಥೆಯವರು ಮತ್ತು ಕಾರ್ಮಿಕರು ಸೇರಿ ಒಪ್ಪಂದ ಮಾಡಿಕೊಂಡು ಡಿಕ್ಲೇರ್ ಮಾಡಬೇಕೆಂದು ಅಭಿಪ್ರಾಯ.

ಶ್ರೀ ಎಸ್. ಗೋಪಾಲ ಗೌಡ.—ಎರಡನೆಯದಾಗಿ ಗಾಂಧಿ ಜಯಂತಿ ವಿಷಯವಾಗಿ ಅವರ ಪ್ರಸ್ತಾಪ ಮಾಡಿದ್ದಾರೆ. ಕಾರ್ಮಿಕ ಸಂಘಗಳ ಬಗ್ಗೆ ಅವರು ಮೇ ದಿನಾಚರಣೆಯ ವಿಷಯದಲ್ಲಿ ತಾಳಿದ ವರ್ತನೆಯ ಬಗ್ಗೆ ಆಗಲೇ ಹೇಳಿದೆ. ಆ ಮಾತು ಈ ದೇಶದ ಆಡಳಿತಗಾರರಿಗೆ ಮಹಾತ್ಮಾ ಗಾಂಧಿಯವರ ಬಗ್ಗೆಯೂ ಸಲ್ಲುತ್ತದೆ. ಈ ಯುಗದಲ್ಲಿ ಮಹಾತ್ಮಾ ಗಾಂಧೀಜಿಯವರು ಯುಗ ಪ್ರವರ್ತಕರು. ಹೊಸ ಒಂದು ಯುಗವನ್ನೇ ಪ್ರಾರಂಭ ಮಾಡಿದರು ಎಂದು ಹೇಳಿದರೆ ಬಹುಶಃ ಉತ್ಪ್ರೇಕ್ಷೆ ಆಗಲಾರದು ಅಥವಾ ಭಿನ್ನಾಭಿಪ್ರಾಯ ಕೂಡ ಇರಲಾರದು. ಆದರೆ ಆಡಳಿತ ವಹಿಸಿರತಕ್ಕ ಮಹಾತ್ಮಾ ಗಾಂಧೀಜಿಯವರ ಅಧಿಕೃತ ಅನುಯಾಯಿಗಳು ಎಂದು ಹೇಳತಕ್ಕವರಿಗೆ ಅವರ ವಿಷಯದಲ್ಲಿ ಅಷ್ಟು ಗೌರವ, ನಂಬಿಕೆ ಬಂದಂತೆ ಕಾಣಲಿಲ್ಲ. ಕೇವಲ ಒಂದು ದಿವಸ ರಾಜಘಾಟ್‌ನಲ್ಲಿ ಹೋಗಿ ಆಷಾಢಭೂತಿತನದಿಂದ ಫೋಟೋ ತೆಗೆಸಬೇಕೆನ್ನುವುದಕ್ಕೆ, ರಾಮ ಧುನ್ ಹಾಡಿ ವರ್ಷಕ್ಕೊಮ್ಮೆ ಚರಕಾ ನೂಲು ತೆಗೆಯುತಕ್ಕ ಈ ನಕಲಿ ಗಾಂಧಿವಾದಿಗಳನ್ನು ನೋಡುವುದಕ್ಕೆ ಬಹಳ ದುಃಖ ಪಡುತ್ತೇನೆ. ಹೇಗೆ ಕಾರ್ಮಿಕ ಸಂಘಗಳು ಅಂತ ಬೋರ್ಡ್ ಹಾಕಿಕೊಂಡಿರತಕ್ಕ ಸಂಘಗಳು ಇವತ್ತು ತಮ್ಮ ನೀತಿ ನಿಲುವನ್ನು ದಿವಾಳಿ ಮಾಡಿಕೊಂಡು ಈ ದೇಶದಲ್ಲಿ ಬದುಕಿಕೊಂಡಿವೆಯೋ ಹಾಗೆಯೇ ಗಾಂಧೀಯವರ ಹೆಸರಿನಲ್ಲಿ ಬದುಕಿರತಕ್ಕ ಈ ಸರ್ಕಾರಗಳು ಅವರ ಎಲ್ಲಾ ನೆನಪನ್ನು ಕೂಡ ಕಳೆದು ಕೊಂಡು ಉಳಿದುಕೊಂಡಿರತಕ್ಕ ಗಾಂಧಿ ಹೆಸರಿನಲ್ಲಿ ಬದುಕಿಕೊಂಡಿರತಕ್ಕ ಸಂಸ್ಥೆಗಳು ಎಂದು ಹೇಳಬಹುದು. ಇದನ್ನು ತಾವು ವಿಚಾರ ಮಾಡಬೇಕು. ಮಹಾತ್ಮಾ ಗಾಂಧೀಜಿಯವರ

(ಶ್ರೀ ಎಸ್. ಗೋಪಾಲಗೌಡ)

ಜನ್ಮದಿನ ಮತ್ತು ಮರಣದ ದಿನ ಅಥವಾ ಕೊಲೆ ಮಾಡಿದ ದಿನ ಈ ಎರಡನ್ನೂ ಕಡ್ಡಾಯವಾಗಿ ಈ ದೇಶದ ಜನ, ಅವರಿಗೆ ಏನಾದರೂ ಕೃತಜ್ಞತೆ ಇರುವುದಾದರೆ ಅವರಿಗೇನಾದ ಆ ಹಿರಿಯರ ಬಗ್ಗೆ, ಮಹಾತ್ಮರ ಬಗ್ಗೆ ಏಳ್ಳಷ್ಟಾದರೂ ಪ್ರಾಮಾಣಿಕತೆ, ನಂಬಿಕೆ ಇರುವುದಾದರೆ ಈ ದೇಶ ಬದುಕಿ ಬಾಳುವ ತನಕ ಆ ಮಹಾ ವ್ಯಕ್ತಿಯ ನೆನಪನ್ನು ತಂದುಕೊಳ್ಳುವುದಕ್ಕೆ ಮತ್ತು ಅವರ ತತ್ವಗಳನ್ನು ಈ ದೇಶದ ಜನ ಆಚರಣೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು.

ಬುದ್ಧನಿಗೆ ಈ ದೇಶದಲ್ಲಿ ಯಾವ ಗತಿ ಬಂತು ? ಅದೇ ಗತಿ ಮಹಾತ್ಮ ಗಾಂಧೀಯವರಿಗೂ ಬಂತು! ಈ ದಿವಸ ಮಹಾತ್ಮ ಗಾಂಧೀಯವರ ಅನುಯಾಯಿಗಳಾಗಿಂತಕವರು ಯಾರಾದರೂ ಇದ್ದರೆ ಅವರೂ ಸಹ ಈ ದೇಶದಲ್ಲಿ ನಮಗೂ ಇಂಥ ದುರ್ಗತಿಯೇ ಬಂದೀತೆಂದು ಹೇಳಿ ಅವರು ಅಮೇರಿಕಾಕ್ಕೋ ಅಥವಾ ರಷ್ಯಕ್ಕೋ ಅಥವಾ ಇನ್ಯಾವ ದೇಶಕ್ಕೋ ಹೋಗಿ ಅಲ್ಲಿ ಅವರು ಬದುಕಿ ಕೊಳ್ಳುವಂಥ ಸಂದರ್ಭಗಳೂ ಬರಬಹುದು. ಏಕೆಂದರೆ ಈ ದೇಶದ ಜನರ ಶೀಲ, ಸದ್ಗುಣ, ಸಂಪತ್ತು ಹಾಗೂ ಅವರ ನಡತೆಯ ಬಗ್ಗೆ ಒಂದು ದೊಡ್ಡ ಶಂಕೆಯುಂಟಾಗಿದೆ. ಅಷ್ಟೇ ಅಲ್ಲದೆ ಇವರ ಪ್ರಾಮಾಣಿಕತೆಯ ಬಗ್ಗೆಯೂ ದೊಡ್ಡ ಅನುಮಾನಗಳೇಳುತ್ತಿದೆ. ಈ ದಿವಸ ಇಂತಕ್ಕ ಸರ್ಕಾರ ಜನರನ್ನು ಅಂಥಾ ಒಂದು ದಾರಿಗೆ ಹಚ್ಚಿ ಸತಕ್ಕ ಒಂದು ಸಂಸ್ಥಾನ ಸರ್ಕಾರವಾಗಿದೆ ಅಂತ ಬಹಳ ದುಃಖದಿಂದ ಹೇಳಬೇಕಾಗಿದೆ. ಈ ದಿವಸ ಈ ಬಿಲ್ಲಿನಲ್ಲಿ ಬಹಳ ಪ್ರಾಮುಖ್ಯತೆ ಕೊಟ್ಟಿರತಕ್ಕ ಎರಡು ರಜಾ ದಿನಗಳೆಂದರೆ ಜನವರಿ 26ನೇ ತಾರೀಖು ಒಂದು ಮತ್ತು ಆಗಸ್ಟ್ 15ನೇ ತಾರೀಖು ಒಂದು. ಈ ಎರಡು ಉತ್ಸವಗಳ ಹೊರತು ಇವರಿಗೆ ಬೇರೆ ಇನ್ಯಾವ ಮಹತ್ವದ ವಿಚಾರಗಳೂ ಇವರಿಗೆ ಬೇಕಾಗಿಲ್ಲ. ಆದ್ದರಿಂದಲೇ ಈ ಎರಡು ದಿನಗಳು ಮಾತ್ರ ಈ ಮಸೂದೆಯಲ್ಲಿ ಬಹಳ ಪ್ರಾಮುಖ್ಯ ವಾಗಿ ತೋರಿಸಿದ್ದಾರೆ. ಆದರೆ ಮಹಾತ್ಮ ಗಾಂಧಿಯವರು ಈ ದೇಶದಲ್ಲಿ ಹುಟ್ಟಿದ್ದು ಅಕ್ಟೋಬರ್ 2ನೇ ತಾರೀಖು. ಈ ದಿನಾಚರಣೆ ಬಗ್ಗೆ ಈ ಮಸೂದೆಯಲ್ಲಿ ಒಂದು ಅಂಶ ಕೂಡ ಇಲ್ಲ ಎಂದು ಯಾರೂ ಅವರಿಲ್ಲಿ ಹುಟ್ಟಲೇ ಇಲ್ಲ ಎಂತ ಹೇಳಲು ಸಾಧ್ಯವಿಲ್ಲ—ಈ ವಿಚಾರವನ್ನು ಯಾರೂ ಅಲ್ಲಗಳೆಯ ಲಾರರು. ಹಾಗೆ ಆ ಮಹಾತ್ಮ ಗಾಂಧಿಯವರನ್ನು ಜನವರಿ 30ನೇ ತಾರೀಖಿನ ದಿನ ಕೊಂದು ಹಾಕಿದ್ದು ನಿಜ. ಆದರೆ ಈ ವಿಚಾರಗಳು ಈ ಮಸೂದೆಯಲ್ಲಿವೆ ಎಂತ ಇವುಗಳನ್ನು ಅಳಿಸಿ ಹಾಕುವು ದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಈ ದಿವಸಗಳನ್ನು ನಾವು ಗಂಭೀರವಾದ ರೀತಿಯಲ್ಲಿ ಕಡ್ಡಾಯ ವಾಗಿ ಸರ್ಕಾರಿ ರಜಾ ದಿನಗಳನ್ನಾಗಿ ಆಚರಿಸುವಂತೆ ಮಾಡಿ ಎಂತ ಹೇಳಿದರೆ ಈ ಬಗ್ಗೆ ಈ ಸರ್ಕಾರಕ್ಕೆ ಒಂದು ದೊಡ್ಡ ಸಂಕೋಚ ಬಂದಿದೆ. ಹೀಗೆ ಸಂಕೋಚ ಬಂದಿರುವುದಕ್ಕೆ ಇವರಲ್ಲಿ ಆ ಮಹಾತ್ಮನ ಬಗ್ಗೆ ಇರಬೇಕಾದ ನಂಬಿಕೆಯ ದುರ್ಬಲತೆಯೇ ಕಾರಣ. ಆದರೂ ಈ ಅನುಯಾಯಿಗಳು ಆ ಮಹಾತ್ಮನನ್ನು ಕೊಂಡಾಡುತ್ತಿದ್ದರೆ ಅದೊಂದು ಆ ನಾಲಗೆಯ ಒಂದು ಶಾಬ್ದಿಕ ನಿಷ್ಠೆ ಅಷ್ಟೇ ಎಂತ ಹೇಳಬಯಸುತ್ತೇನೆ. ಈ ದಿವಸ ನಮ್ಮ ಮಾನ್ಯ ಕಾರ್ಮಿಕ ಸಚಿವರು ಕಡ್ಡಾಯವಾಗಿ ಏನೊಂದು ಈ ರಿಪಬ್ಲಿಕ್ ಹಾಲಿಡೆ ಮತ್ತು ಇಂಡಿಪೆಂಡೆನ್ಸ್ ಹಾಲಿಡೆಗಳನ್ನು ಆಚರಿಸಬೇಕೆಂತ ಈಗ ಇದರಲ್ಲಿ ನಮೂದಿಸಿದ್ದಾರೋ, ಈ ಅರ್ಥ ಇನ್ನುಳಿದಿರತಕ್ಕ 5 ರಜಾ ದಿನಗಳಲ್ಲಿ ಈ ಮಹಾತ್ಮ ಗಾಂಧಿಯವರು ಹುಟ್ಟಿದ ದಿನ ಮತ್ತು ಅವರು ಮರಣ ಹೊಂದಿದ ದಿನಗಳನ್ನು ಆಚರಿಸಬಹುದೆಂದು ಹೇಳಿದರೆ ಬಂದಿತೇನು ! ಈ ವಿಷಯ ಕರ್ಕರ್ನೆಸ್ ಲಿಸ್ಟಿನಲ್ಲಿದೆ, ನಾವು ಕೇಂದ್ರ ಸರ್ಕಾರಕ್ಕೆ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ ಎಂತ ಹೇಳಿದರೆ ನಾವೇನು ಹೇಳೋಣ ! ರಾಜ್ಯದಲ್ಲಿ ರಾಷ್ಟ್ರೀಯ ರಜಾ ದಿನಗಳನ್ನು ಡಿಕ್ಲೇರ್ ಮಾಡುವುದಕ್ಕೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳತಕ್ಕದ್ದೇನಿದೆ ! ಇದು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಷಯ.

ಶ್ರೀ ಡಿ. ದೇವರಾಜ ಅರಸ್.—ಅವರು ಸಲಹೆ ಮಾಡುವುದರಲ್ಲೂ ಒಂದು ಅರ್ಥವಿದೆ.

ಶ್ರೀ ಎಸ್. ಗೋಪಾಲ ಗೌಡ.—ನನಗೆ ಇಂಗ್ಲೀಷ್ ಅಷ್ಟು ಚೆನ್ನಾಗಿ ಬರುವುದಿಲ್ಲ. ಈಗ ತಾವು ತಂದಿರುವ ಮಸೂದೆಯ ಪ್ರೀಅಂಬಲಿನಲ್ಲಿ ಏನು ಹೇಳಿದೆ ಎಂಬುದನ್ನು ನೋಡಿ.

> "As the Government of India have requested that appropriate action should be taken to enforce the observance of National and Festival Holidays as holidays with wages........"

ಶ್ರೀ ಡಿ. ದೇವರಾಜ ಅರಸ್.—ಅದೊಂದು ಸೌಜನ್ಯಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಎಸ್. ಗೋಪಾಲಗೌಡ.—ಆದರೆ ಆ ಸೌಜನ್ಯಕ್ಕೂ ಅರ್ಥವಿರಬೇಕು. ಈ ದಿವಸ ಹೀಗೆ ಈ ಒಂದು ರಾಷ್ಟ್ರೀಯ ರಜಾ ದಿನಗಳನ್ನು-ಹಬ್ಬಗಳ ದಿನಗಳನ್ನು ಡಿಕ್ಲೇರ್ ಮಾಡಬೇಕಾಗಿದ್ದರೆ

ಇದಕ್ಕೆಲ್ಲಾ ಕಾನೂನು ಬೇಕು. ಗೋಲ್ಡ್ ಮೈನಿಂಗನ್ನು ಅವರು ವಹಿಸಿಕೊಳ್ಳುವ ಬಗ್ಗೆ ಯಾವ ಕಾನೂನು ಬೇಡ! ಅದ್ಯಾವ ಕೇಂದ್ರ ಸರ್ಕಾರ! ಆ ನಮ್ಮ ಗೋಲ್ಡ್ ಮೈನಿಂಗನ್ನು ವಹಿಸಿಕೊಳ್ಳುವ ಮೊದಲು ನಾವು ಎಷ್ಟು ಸಲ ಅದನ್ನಿಲ್ಲಿ ಚರ್ಚೆ ಮಾಡಿದ್ದೇವೆಂಬುದನ್ನು ಹೇಳುತ್ತೀರಾ? ಎಲ್ಲಿ ಚರ್ಚೆ ಮಾಡಿದ್ದೇವೆ! ಈ ವಿಚಾರಗಳನ್ನು ನಮ್ಮ ರಾಜ್ಯಾಂಗ ಯಾವ ರೀತಿ ಡಿಕ್ಲೇರ್ ಮಾಡಬೇಕೆಂದು ಹೇಳಿದೆಯೋ ಆ ರೀತಿ ಡಿಕ್ಲೇರ್ ಮಾಡಲಾಗಿದೆಯೇ? ಅನೇಕರೇನು ದೆಹಲಿಗೆ ಹೋಗಿ ಅಲ್ಲಿರತಕ್ಕ ಆ ಒಂದು ಕೇಂದ್ರ ಸರ್ಕಾರ ಅಂತ ಯಾವುದನ್ನು ನೋಡಿಕೊಂಡು ಬರುತ್ತಿದ್ದಾರೋ ಆ ಸರ್ಕಾರಕ್ಕೆ ಬುದ್ಧಿಯಿರಬೇಕು ಎಂತ ಹೇಳುವುದರಲ್ಲಿ ಅಡ್ಡಿಯೇನಿಲ್ಲ.

Mr. SPEAKER.—Central Government need not be criticised. Even the other point the Hon'ble Member is developing with regard to......

ಶ್ರೀ ಎಸ್. ಗೋಪಾಲ ಗೌಡ.—ನಾವು ಈ ದಿವಸ ಇಷ್ಟು ದಿನಗಳನ್ನು ರಾಷ್ಟ್ರೀಯ ರಜಾ ದಿನಗಳನ್ನಾಗಿ ಮಾಡಿ ಎಂತ ಕೇಳಿ ಕೊಳ್ಳುತ್ತಿದ್ದರೆ—ಇವರು ನಾವೀಗ ಕೇಂದ್ರ ಸರ್ಕಾರದವರನ್ನು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ, ಎಂಪ್ಲಾಯರುಗಳನ್ನು ಕೇಳದೆ ಮಾಡಿದರೆ ಆಕ್ಷೇಪಣೆ ಬರುತ್ತದೆ ಕೇಂದ್ರದ ಅಪ್ಪಣೆ ಇಲ್ಲದ ಮಾಡಬಾರದು ಎಂತ ಇಷ್ಟೆಲ್ಲಾ ಹೇಳತಕ್ಕವರು ಇಲ್ಲಿಯವರೆಗೆ ಮಾಡಿರತಕ್ಕದ್ದರಲ್ಲಿ ಯಾವುದು ಸರಿಯಾಗಿದೆ! ಇದೆಲ್ಲ ಒಂದು ನಾಟಕ!

ಅಧ್ಯಕ್ಷರು.—ಈಗ ಅನೇಕ ಸಂದರ್ಭಗಳಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡತಕ್ಕ ಕಾಲದಲ್ಲಿ "ಮಂತ್ರಿಗಳು ಅಪ್ಪಣೆ ಕೊಡಿಸಿರತಕ್ಕ ಪ್ರಕಾರ" ಎಂದು ಹೇಗೆ ಮಾತನಾಡುತ್ತಿದ್ದಾರೋ ಹಾಗೆ ಇಲ್ಲಿಯೂ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್. ಗೋಪಾಲ ಗೌಡ.—ಆ ಕೇಂದ್ರ ಸರ್ಕಾರದ ಮನಸ್ಸು ಕೆಟ್ಟ ಕೊಳೆತ ಮನಸ್ಸು. ಅದನ್ನು ಸೃಷ್ಟಿ ಮಾಡತಕ್ಕವರು ಯಾರು? ಈ ದಿವಸ ನಮ್ಮ ರಾಜ್ಯದಲ್ಲಿ ಇಂಥಾ 1-2 ದಿನಗಳನ್ನು ರಾಷ್ಟ್ರೀಯ ರಜಾ ದಿನಗಳನ್ನಾಗಿ, ಅಥವಾ ರಾಷ್ಟ್ರೀಯ ಹಬ್ಬದ ದಿನಗಳನ್ನಾಗಿ ಆಚರಿಸಬೇಕೆಂಬ ಮನಸ್ಸು ಬಂದರೆ ಇವರೂ ಮಾಡಬಹುದು. ಹಾಗಿರುವಾಗ ಈ ವಿಚಾರದಲ್ಲಿ ಇಷ್ಟೆಲ್ಲ ಗೊಂದಲ ವೇತಕ್ಕೆ ಬೇಕು? ಈ ದಿವಸ ಈ ಮಸೂದೆಯಲ್ಲಿ ರಾಷ್ಟ್ರೀಯ ರಜಾ ದಿನಗಳು ಎಂತ ಏಕೆ "ಆ ರಾಷ್ಟ್ರೀಯ" ಎಂಬ ಅಡ್ಜೆಕ್ಟಿವ್ ಪದವನ್ನು ಈ ರಜಾ ದಿನಗಳಿಂದ ಈಗ ಉಪಯೋಗಿಸಿದ್ದಾರೆ! ಅದರ ಅರ್ಥವಾದರೂ ಏನು? ಈಗ ಅನುಸರಿಸಿರತಕ್ಕ ಕ್ರಮ ಬಹಳ ತಪ್ಪಾದದ್ದು. ಈ ಸರ್ಕಾರದವರು ಈ ವಿಚಾರಗಳನ್ನೆಲ್ಲ ಶ್ರೀ ಗುಲ್ಜಾರಿಲಾಲ್ ನಂದಾರವರಿಗೆ ಹೇಳಿ ನಾನು ಹೇಳಿದ ದಿನಗಳನ್ನು ಈ ಕಾನೂನಿನಲ್ಲಿ ಅಡಕವಾಗುವಂತೆ ಮಾಡಬಹುದು. ಒಂದು ವೇಳೆ ಇವರೇ ಮಾಡಿದರೂ ಇದಕ್ಕೆ ಅವರೇನೂ ಅಡ್ಡಿ ಬರುವುದಿಲ್ಲ. ಆದ್ದರಿಂದ ಈ ನಾಟಕವೆಲ್ಲ ಬೇಡ; ಇಲ್ಲಿಯ ತನಕ ಇವರೇನು ಮಾಡುತ್ತಿದ್ದರು ಎಂತ ಕೇಳುತ್ತೇನೆ? ಈ ವಿಷಯಗಳನ್ನೆಲ್ಲ ಕೇಂದ್ರದವರಿಗೂ ತಿಳಿಸಲಿ, ಈ ವಿಷಯವನ್ನು ಆ ಫ್ಯಾಕ್ಟರಿಗಳವರಿಗೂ ತಿಳಿಸಲಿ, ಈ ರೀತಿ ಈ ಎರಡು ದಿನಗಳನ್ನು ಮತ್ತು ಮೇ ದಿನಾಚರಣೆ ಒಂದು ಈ ಮೂರನ್ನೂ ಕಡ್ಡಾಯವಾಗಿ ರಾಷ್ಟ್ರೀಯ ರಜಾ ದಿನಗಳೆಂದು ಭಾವಿಸತಕ್ಕದ್ದು ಅತಿ ಮುಖ್ಯವಾದದೆಂದು ನಾನು ಭಾವಿಸುತ್ತೇನೆ. ಆದರೆ ಇನ್ನು ಕೆಲವರು ಈ ರಜಾ ದಿನಗಳನ್ನು ಇನ್ನು ಹೆಚ್ಚಿಗೆ ಕೊಡಿ ಎಂತ ಹೇಳಿದ್ದಾರೆ. ಅದು ವ್ಯಕ್ತಿಗಳ ಅಭಿಪ್ರಾಯ ಇದರ ಬಗ್ಗೆ ಭಿನ್ನಾಭಿಪ್ರಾಯವಿರಲು ಸಾಧ್ಯವಿದೆ. ಮುಂದೆ ಇದೊಂದು ಪ್ರತಿಷ್ಠೆಗೆ ಕಾರಣವಾಗಿ ನಾನು ಇಷ್ಟು ದಿನಗಳನ್ನು ಕಡ್ಡಾಯಮಾಡಿ ರಜಾ ದಿನಗಳನು ಮಾಡಿಸಿದೆ ಎಂತ ಹೇಳಿಕೊಳ್ಳತಕ್ಕ ಒಂದು ಸಂದರ್ಭವಿರುವುದರಿಂದ ನಾನು ಈ ರಜಾ ದಿನಗಳು ಇಷ್ಟೇ ಇರಬೇಕು ಎಂದು ಶ್ರೀಮಾನ್ ಸಂಜೀವನಾಥ ಐಕಳರವರು ಮೂರು ದಿನ ಜಾಸ್ತಿ ರಜಾ ಕೊಡಬೇಕೆಂದು ಕೇಳಿದ ಹಾಗೆ—ಅಂದರೆ ನಾಳೆ ಅವರು ಕಾರ್ಮಿಕರಲ್ಲಿ ಹೋಗಿ ಈ ವಿಚಾರ ತಿಳಿಸಿ ಅವರನ್ನು ಖುಷಿಪಡಿಸಬಹುದು, ಇಂಥಾ ಒಂದು ಸಂದರ್ಭವಿರುವುದರಿಂದ ಈ ವಿಚಾರದಲ್ಲಿ ಸದ್ಯಕ್ಕೆ ನಾನು ಏನನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಂಜೀವನಾಥ ಐಕಳ.—ಮಾನ್ಯ ಸದಸ್ಯರು ಮಾಡತಕ್ಕ ರೆಫರನ್ಸ್ ಸರಿಯಾದ್ದಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಈ ರಜಾ ದಿನಗಳು 10 ಇರಬೇಕೇ—13 ಇರಬೇಕೇ ಅಥವಾ 8 ಇರಬೇಕೇ ಎನ್ನತಕ್ಕ ವಿಷಯಕ್ಕೆ ನಾನೀಗ ಹೋಗುವುದಿಲ್ಲ.

Mr. SPEAKER.—He is interpreting in his own way.

Sri SANJEEVANATH AIKALA.—Sir, the Hon'ble Member has not understood me properly.

Mr. SPEAKER.—Sri Gopala Gowda knows that if there are more holidays, production will be less and he is not for that.

ಶ್ರೀ ಎಸ್. ಗೋಪಾಲಗೌಡ.—ಒಂದಾನೊಂದು ಕಾಲದಲ್ಲಿ ಶ್ರೀ ಸಂಜೀವನಾಥ ಐಕಳರವರೂ ನಾನೂ ಒಟ್ಟಿಗೇ ಇದ್ದೆವು. ಈಗ ಆ ಕಾಲವಿಲ್ಲ. ನಾನು ಒಟ್ಟಿನಲ್ಲಿ ಇಷ್ಟನ್ನು ಹೇಳುತ್ತೇನೆ—ಮೇ ದಿನಾಚರಣೆ ಮತ್ತು ಮಹಾತ್ಮ ಗಾಂಧಿಯವರ ಬಗ್ಗೆ 2 ದಿನ ರಜ, ಈ ಮೂರನ್ನು ಕಡ್ಡಾಯವಾಗಿ ರಾಷ್ಟ್ರೀಯ ರಜಾ ದಿನಗಳನ್ನಾಗಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ Exemptions ಕ್ಲಾಜನ್ನು ಏತಕ್ಕೆ ಇಡಲಾಗಿದೆಯೋ ತಿಳಿಯದು. ಈ ಒಂದು ವಿನಾಯಿತಿಯನ್ನು ತಾನೇ ಏಕೆ ತೋರಿಸಬೇಕು ? ಈ ಫ್ಯಾಕ್ಟರಿ, ಫರ್ಮುಗಳಿಗೆ ಇಂಥಾ ವಿನಾಯಿತಿ ಅನವಶ್ಯಕ. ಇದನ್ನು ಈ ಫ್ಯಾಕ್ಟರಿ, ಫರ್ಮುಗಳ ಬಗ್ಗೆ ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳುತ್ತೇನೆ. ಹಾಗಿಲ್ಲದೆ ಈ ದಿವಸ ಈ ಒಂದು ವಿನಾಯಿತಿ ಇದ್ದ ಪಕ್ಷದಲ್ಲಿ ಕೆಲವು ಮಿಲ್ಲುಗಳವರು ರಿಪಬ್ಲಿಕ್ ಡೇ ದಿವಸವೇ ಕೆಲಸ ನಡೆಸುತ್ತೇವೆಂತ ಹೇಳಬಹುದು. ಇದರಿಂದ ಬಹಳ ತೊಂದರೆ ಬರುತ್ತದೆ. ಆದರೆ ಏನು, ಕೆಲವು ಈ ಎಸ್ಸೆನ್ಷಿಯಲ್ ಸರ್ವೀಸ್‌ಗಳೆಂತ ಈ ರೈಲ್ವೆ ಇತ್ಯಾದಿ ಬಾಬುಗಳಿವೆಯೋ ಅವುಗಳನ್ನು ಮಾತ್ರ ಹೊರಪಡಿಸಿ ಬಾಕಿ ಯಾವುದಕ್ಕೂ ಈ ವಿನಾಯಿತಿಯನ್ನು ತೋರಿಸಬಾರದು. ಹಾಗೂ ತಾವು ವಿನಾಯ್ತಿ ಕ್ಲಾಜನ್ನು ಇಟ್ಟುಕೊಂಡಲ್ಲಿ ಭ್ರಷ್ಟಾಚಾರ ಮಾಡತಕ್ಕ ಎಷ್ಟೋ ಜನ ನಿಷ್ಣಾತರು ಇದರಿಂದ ದುಡ್ಡು ಮಾಡಲು ಹೊರಡುತ್ತಾರೆ.

ಈ ಕಾಯಿದೆಯನ್ನು ಕಾನೂನಿನ ಕಡತಕ್ಕೆ ಏರಿಸುವ ಮುಂಚೆ—ಹೇಗೂ ಏರಿಸುತ್ತೀರಿ—ಒಂದು ಮಾತನ್ನು ನಾನು ಹೇಳಬೇಕು. ಈ ಕಾಯಿದೆಯನ್ನು ಜಾರಿಗೆ ಕೊಡುವುದಕ್ಕೆ ಪ್ರತ್ಯೇಕವಾದ ಸಿಬ್ಬಂದಿಯ ನೇಮಕವಾಗಲೀ, ಹಣಕಾಸಿನ ಖರ್ಚಾಗಲೀ ಬರುವುದಿಲ್ಲವೆಂದು ಮಾನ್ಯಮಂತ್ರಿಗಳು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಅದರ ಸಿಬ್ಬಂದಿ ಈಗ ಇರುವ Factory Act, Shops and Establishments Act ಯಾವ ರೀತಿ ಜಾರಿಗೆ ಕೊಡುತ್ತಿದೆ ಎನ್ನುವುದನ್ನು ಸ್ವಲ್ಪ ಗಮನಿಸಬೇಕು ಇದು national ಹಬ್ಬದ ದಿನಗಳು. ಇದರಲ್ಲಿ ಬಹುಶಃ ಅಷ್ಟು Corruption ನಡೆಯುವುದಕ್ಕೆ ಅವಕಾಶವಿಲ್ಲವೆಂದು ಹೇಳಬಹುದು. ಹಾಗೆಯೇ ಹತ್ತುರೂಪಾಯಿ ಕೊಟ್ಟುಕೊಂಡು Republic Day ದಿವಸ ಕೆಲಸ ಮಾಡಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಆ ಮಾತನ್ನು ನಾನು ಸ್ವಲ್ಪಮಟ್ಟಿಗೆ ಒಪ್ಪುತ್ತೇನೆ. ದೊಡ್ಡ ಸಂಭ್ರಮದ ದಿನವಾದಾಗ ಯಾವುದೋ ಒಂದು ಮೂಲೆಯಲ್ಲಿ ಒಂದು ಸಣ್ಣ ಕಾರ್ಖಾನೆಯಲ್ಲಿ ಕೆಲಸ ನಡೆಯದೆ ಇರುವುದಿಲ್ಲವೆಂದು ಹೇಳಬಹುದು. ಆದರೆ ಇನ್ನೊಂದು ಪರಿಸ್ಥಿತಿಯನ್ನು ನೋಡಿದರೆ ನಿಮ್ಮ ಸಿಬ್ಬಂದಿ, ನಿಮ್ಮ executive side ನೋಡುವುದಾದರೆ ಅವರು ಯಾವುದನ್ನೂ ಗಮನಿಸುವುದಿಲ್ಲ. ಬಹಳ ಸಲ ಕಾನೂನು ಮುರಿಯುವುದರಲ್ಲಿಯೇ ಕೆಲಸ ಪರಿಪೂರ್ಣವಾಗುತ್ತದೆ. ಈ ದಿನ ಕೆಲಸವಿಲ್ಲ, ಇಂಥ ದಿನ ರಜ ಎಂದು ಎಷ್ಟೋ ಅಂಗಡಿಗಳ ಮುಂದೆ ಬೋರ್ಡ್ ಹಾಕಿರುತ್ತಾರೆ, ಅಷ್ಟೆ. ಯಾವ ದಿವಸ ರಜ ಕೊಡಬೇಕು ಎಂದು ಬೋರ್ಡ್ ಹಾಕಲೇ ಬೇಕು ಎಂದು ಕಾನೂನಿನಲ್ಲಿ ಹೇಳಿದ್ದೀರಿ. ಬೋರ್ಡ್ ಇಲ್ಲದೇ ಹೋದರೆ ಕೇಸ್ ಹಾಕುತ್ತೀರಿ, ರಜ ಕೊಡದೆ ಇದ್ದರೆ ಅಲ್ಲ. ಇಂಥ ದಿವಸ ರಜ ಎಂದು ಹೇಳಿ ಬೋರ್ಡ್ ಹಾಕಿದರೆ ಕೇಸ್ ಹಾಕುವುದಿಲ್ಲ. ಅವರು ರಜ ಕೊಡುತ್ತಾರೆಯೋ ಇಲ್ಲವೋ ಎಂದು ವಿಚಾರಣೆ ಮಾಡುವಷ್ಟು ನಿಮ್ಮ ಸಿಬ್ಬಂದಿ ಪ್ರಾಮಾಣಿಕವಾಗಿಲ್ಲ, ದಕ್ಷವಾಗಿಲ್ಲ. ಇದನ್ನು ತಾವು ವಿಚಾರ ಮಾಡಬೇಕು.

ಇನ್ನು ಈ ಕಾನೂನನ್ನು ಆಚರಣೆಗೆ ತರುವ ವಿಚಾರಕ್ಕೆ ಬಂದರೆ, ಬಹಳ ಕಡೆಗಳಲ್ಲಿ ಕಾರ್ಮಿಕರ ಶಾಸನಗಳು ಸರಿಯಾದ ರೀತಿಯಲ್ಲಿ ಆಚರಣೆಗೆ ಬರುತ್ತಿಲ್ಲ. ಆದುದರಿಂದ ಇಂಥ ಸಂದರ್ಭದಲ್ಲಿ ನಾವು ಹಾಗಾಗದಂತೆ ನೋಡಿಕೊಳ್ಳಬೇಕು. ಇರುವ ಕಾನೂನನ್ನು ಜಾರಿಗೆ ಕೊಡುವುದರಲ್ಲಿ ಸ್ವಲ್ಪ ಮುತುವರ್ಜಿ ವಹಿಸಬೇಕು ಎಂದು ಹೇಳುತ್ತೇನೆ. ಈ ಕಾನೂನು ಅನ್ವಯಿಸುವಂಥ establishments ಯಾವುವು ಎನ್ನುವ ಬಗ್ಗೆ definitions ನಲ್ಲಿ ಕೊಟ್ಟಿರುವುದನ್ನು ನಾನು ಪರಿಶೀಲನೆ ಮಾಡಿದ್ದೇನೆ. ಹಳ್ಳಿಗಳಲ್ಲಿ ಅನೇಕ ರೀತಿಯಲ್ಲಿ ಜನರನ್ನು ಕೆಲಸಕ್ಕೆ ನೇಮಕ ಮಾಡುತ್ತಾರೆ. ಆದರಲ್ಲಿ ಪ್ಲಾಂಟೇಷನ್‌ಗಳಿಗೆ ಪ್ರತ್ಯೇಕ ಕಾನೂನು ಇರುವುದರಿಂದ ಅವರು ಅದರ ವ್ಯಾಪ್ತಿಯಲ್ಲಿ ಬರುತ್ತಾರೆ. ಹೊಲಗಳಲ್ಲಿ ದುಡಿಯತಕ್ಕವರು, ಇಂಥವರ ಬಗ್ಗೆ ಇದನ್ನು ವಿಸ್ತರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಹೊಲದಲ್ಲಿ ದುಡಿಯುವವರನ್ನು ನೂರಾರು ಜನರನ್ನು ಕೆಲಸದ ಮೇಲೆ ಇಟ್ಟುಕೊಳ್ಳುವ ವ್ಯವಸ್ಥೆ ಇವೊತ್ತು ಇವೆ. ಅವರಿಗೆ roll ಇರುವುದಿಲ್ಲ. ಖಾಯಂ ಆಗಿ ಅವರಿಗೆ ಕೆಲಸ ಕೊಡುವುದಿಲ್ಲ. ಪ್ರತಿ ಸಲವೂ, ಪ್ರತಿತಿಂಗಳೂ ಹೊಸಬರಾಗಿ ಅವರನ್ನೇ ನೋಡಿಸುವುದೂ ಇದೆ. ಸರ್ಕಾರದಲ್ಲಿ ಸಹ ಆರೀತಿ ಇಲ್ಲವೇ ಎಂದು ನಾನು ಧೈರ್ಯಮಾಡಿ ಮಾನ್ಯ ಸಚಿವರನ್ನು ಕೇಳುತ್ತೇನೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಎಷ್ಟೋ ಜನರನ್ನು temporary ಎಂದು ಇಟ್ಟುಕೊಂಡಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಂತೂ ಗೊತ್ತೇ ಇದೆ gang ಎಂದು ಹೇಳುತ್ತಾರೆ. ಅವರದೇ

ಒಂದು ತರಹ ಸರ್ವಿಸ್. ಮುವ್ವತ್ತು ವರ್ಷವಾದರೂ daily cooly; ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸಹ ಪ್ರತಿ ತಿಂಗಳೂ ರೋಲ್ ಬರೆಯುವುದರಲ್ಲಿ ಅವನು ಹೊಸಬನಾಗಿಯೇ ಇರುತ್ತಾನೆ. ಕೆಲಸ ಬಿಡುವುದಿಲ್ಲ ಅಲ್ಲಿಯೇ ಇರುತ್ತಾನೆ. ಆದರೆ ದಾಖಲೆಯಲ್ಲಿ ಮಾತ್ರ ಹೊಸಬ. ಯಾರಾದರೂ ಎಲ್ಲಿದ್ದೀಯಾ ಎಂದರೆ 20 ವರ್ಷದಿಂದ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿದ್ದೇನೆಂದು ಹೇಳಿಕೊಳ್ಳುತ್ತಾನೆ. ಅವನಿಗೆ ಯಾವ ಕಾನೂನಿನ ಸವಲತ್ತುಗಳೂ ಸಿಕ್ಕದೆ ಹೋಗಿವೆ. ಕಾರಣ ಕೇಳಿದರೆ, ಅಕಸ್ಮಾತ್ ಯಾವುದೋ ಒಂದು ಕಡೆ ಕೆಲಸಕ್ಕೆ ಬೇಕಾಗುತ್ತಾರೆ ಆದ್ದರಿಂದ 20 ಜನ ಯಾವತ್ತಿಗೂ ನಮ್ಮ ಹತ್ತಿರವಿರಬೇಕು. ಅವರನ್ನು ಖಾಯಂ ಮಾಡಿದರೆ ಬಹಳ ಲುಕ್ಸಾನಾಗುತ್ತದೆ ಎಂದು ವಿವರಣೆ ಕೊಡುತ್ತಾರೆ. ಐದು ಸಾವಿರ ಜನ pay rollನಲ್ಲಿದ್ದಾರೆ. ಎಲ್ಲರಿಗೂ ಸಂಬಳ ಸರಿಯಾಗಿ ಸಿಕ್ಕೇ ಸಿಕ್ಕುತ್ತದೆ. ಆದರೆ ಕಾನೂನಿಗೆ ಸರಿಯಾಗಿ ಮಾಡುತ್ತಿಲ್ಲ. ಈ ರೀತಿ ತಮ್ಮ ಇಲಾಖೆಯಲ್ಲಿಲ್ಲವೇ ಎಂದು ಮಾನ್ಯ ಕಾರ್ಮಿಕ ಸಚಿವರನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳಿದುದನ್ನು ಮಾನ್ಯ ಸದಸ್ಯರು ಸ್ವಲ್ಪ ಸರಿಯಾಗಿ ತಿಳಿದುಕೊಂಡಿಲ್ಲವೆಂದು ಅರ್ಥವಾಗುತ್ತದೆ. ಸಂಘಸಂಸ್ಥೆಗಳೇನಿವೆ. ಅದರಲ್ಲಿ ರಜಾ ದಿನಗಳನ್ನು ಕೊಡುವ ವಿಚಾರದಲ್ಲಿ ಸರ್ಕಾರದವರು ಮಾಡಿರತಕ್ಕ ಕಾನೂನಾಗಲೀ, ಆಗಿಂದಾಗ್ಗೆ ಹೊರಡಿಸುವ Notifications ಆಗಲೀ ಅವುಗಳನ್ನು ಆ ಸಂಸ್ಥೆಗಳು ಜಾರಿಗೆ ತರುವುದಿಲ್ಲವೆನ್ನುವ ಮಾತಿಗೆ ಮಾತ್ರ ಅನ್ವಯಿಸುವ ಹಾಗೆ ಹೇಳಿದೆ. ಕಾರ್ಮಿಕರಿಗೆ ಸಂಬಂಧಪಟ್ಟಂತೆ ಅನೇಕ ಕಾನೂನುಗಳೇನಿವೆ ಅದರ ರಕ್ಷಣೆಯ ಬಗ್ಗೆ, ಅದು ಎಲ್ಲದರಲ್ಲಿಯೂ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂದು ಪ್ರಸ್ತಾಪಮಾಡಿ ಹೇಳುತ್ತಿಲ್ಲ. ಬರೀ ರಜಾದಿನಗಳಿಗೆ ಅನ್ವಯಿಸುವ ವಿಷಯಕ್ಕೆ ಮಾತ್ರ ಹೇಳಿದೆ.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟದ್ದು ಬಹಳ ಸಂತೋಷ. ನಾನು ಒಂದು ಹೆಜ್ಜೆ ಹಿಂದೆ ಹೋಗಿ ಹೇಳಿದೆ.

ಸರ್ಕಾರ ಮಾದರಿ ಮಾಲೀಕನಾಗಲಿಲ್ಲ. ಕಾನೂನಿನ ಮಧ್ಯೆ ಮಧ್ಯೆ ತೂರಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿರತಕ್ಕ ದೊಡ್ಡ ಮಾಲೀಕ ಸರ್ಕಾರವೇ ಆಗಿದೆ; ಇವೊತ್ತು ಬಹಳ ಜನ ನೌಕರರನ್ನು ಇಟ್ಟುಕೊಂಡಿರತಕ್ಕ ಮಾಲೀಕ ಸರ್ಕಾರವೇ ಆಗಿದೆ. ತನ್ನದೇ ಆದ ಕಾನೂನನ್ನು ಮುರಿಯುವುದರಲ್ಲಿ ಕೂಡ ಸರ್ಕಾರವೇ ಅಗ್ರಗಣ್ಯವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಈ ಮಾತನ್ನು ಹೇಳಿದೆ. ಅವರು exemption ಕ್ಲಾಜ್‌ನಲ್ಲಿ ಸರ್ಕಾರಿ ನೌಕರರೆಲ್ಲರನ್ನೂ exempt ಮಾಡಬಹುದು. ಎಲ್ಲ ನೌಕರರೂ ಕೆಲಸ ಮಾಡಲೇಬೇಕು. ಜನವರಿ 26ನೇ ತಾರೀಖು, ಆಗಸ್ಟ್ 15ನೇ ತಾರೀಖು ಕೆಲಸ ಮಾಡಬೇಕು, ಅವರಿಗೆ ರಜವೇ ಇಲ್ಲ ಎಂದು ಮಾಡಬಹುದು. ಕಾನೂನು ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಲಾಗದಂಥಾದ್ದು. ಸ್ವತಃ ಅದಕ್ಕೆ ಕೈ ಕಾಲುಗಳಿಲ್ಲ. ಅದನ್ನು ರಕ್ಷಣೆ ಮಾಡದೆ ಇದ್ದರೆ, ಕಾನೂನಿಗೆ ಗೌರವ, ಅಸ್ತಿತ್ವ, ಮಹತ್ವ ಇಲ್ಲದೇ ಇದ್ದರೆ ಅದಕ್ಕೆ ಬರೀ ಕಾಗದಕ್ಕಿಂತ ಹೆಚ್ಚು ಮಹತ್ವ ಬರುವುದಕ್ಕೆ ಸಾಧ್ಯವಿಲ್ಲ. ಹಳೆಯದಾದಷ್ಟು ಕಡಮೆ ಬೆಲೆ ಕಾಗದಕ್ಕೆ ಬರುತ್ತದೆ. ಆದುದರಿಂದ ಇವುಗಳನ್ನು ನಾವು ಜಾರಿಗೆ ಕೊಡುವಾಗ ಅತಿ ದಕ್ಷ, ಪ್ರಾಮಾಣಿಕ ಮತ್ತು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ಬೇಕಾಗುತ್ತದೆ. ಆವಾಗ ಮಾತ್ರ ಅದರಲ್ಲಿರತಕ್ಕ ಭ್ರಷ್ಟಾಚಾರವನ್ನು ಅವರು ಹೋಗಲಾಡಿಸ ಬಹುದು. ಇದರ ಬಗ್ಗೆ ಕೂಡ ಗಮನ ಕೊಡಬೇಕೆಂದು ಹೇಳುತ್ತೇನೆ.

ರಜ ಕೊಡದೇ ಇರುವುದು ಸಹ ತಮ್ಮ ಇಲಾಖೆಯಲ್ಲಿಯೇ ಇದೆ. ಸಾಮಾನ್ಯ ರಜ್‌ದಿನಗಳನ್ನು ಕೊಡದೇ ಇರುವುದು, ಎಂಟು ಗಂಟೆಗಿಂತ ಜಾಸ್ತಿ ಕೆಲಸ ಮಾಡಿಸುವುದು ಇವೆಲ್ಲ ಇದೆ. ಲೆಜಿಸ್ಲೇಟರ್ಸ್ ಹೋಂನಲ್ಲಿರುವವರೆಲ್ಲ 24 ಗಂಟೆ ಕೆಲಸ ಮಾಡುವವರು. ಅವರೇ ಅದಕ್ಕೆ ಒಪ್ಪಿಕೊಂಡಿದ್ದಾರೆಂದು ಯಾರೋ ಸಮಾಧಾನ ಹೇಳಿದರು. ಇವೊತ್ತು ಬೆಳಗ್ಗೆ 12 ಗಂಟೆಗೆ ಬಂದವರು ನಾಳೆ 12 ಗಂಟೆವರೆಗೂ ಇದ್ದು ಹೋಗುತ್ತಾರೆ. ಇವರೆಲ್ಲ ಟೆಂಪೊರರಿ ನೌಕರರೇ. ಇದು ಸಾಮಾನ್ಯವಾಗಿ ಹಣಕಾಸಿಗೆ ಮಾತ್ರವಲ್ಲ. ಇತರ ಸವಲತ್ತುಗಳನ್ನೂ ನೋಡಿದರೂ ಕೂಡ ಹಾಗೆಯೇ ಇದೆ. ಕಾನೂನುಗಳನ್ನು ಗೌರವಿಸತಕ್ಕ, ಪರಿಪಾಲಿಸತಕ್ಕ ಅಧಿಕಾರಿಗಳು ಅದನ್ನು ಸರಿಯಾಗಿ ನಡೆಸಿಕೊಂಡು ಹೋದಂತಾಗುವುದಿಲ್ಲ. ಅವನು 24 ಗಂಟೆಯೂ ದುಡಿಯುವುದಕ್ಕೆ ತಯಾರಾಗಿದ್ದೇನೆಂದು ಹೇಳಬಹುದು. ಗರ್ಭಿಣಿ ಹೆಂಗಸಾದರೂ ಕೆಲಸ ಮಾಡುವುದಕ್ಕೆ, ಮಣ್ಣು ಹೊರುವುದಕ್ಕೆ ತಯಾರಿದ್ದಾಳೆ. ಎಂಟು ವರ್ಷದ ಒಬ್ಬ ಹುಡುಗನಿದ್ದಾನೆ, ಅವನು ಮಣ್ಣು ಹೊರುವುದಕ್ಕೆ ತಯಾರಿದ್ದಾನೆ. ಕ್ಷಯರೋಗ ಬಂದಿರುವ ಗಂಡಸೂ ಕೆಲಸ ಮಾಡುವುದಕ್ಕೆ ತಯಾರಿದ್ದಾನೆ. Tuberculosis ಇರುವ ಗಂಡಸು, ಗರ್ಭಿಣಿ ಹೆಂಗಸು, ಹೊಟ್ಟೆ ದೊಡ್ಡದು, ಕೈಕಾಲು ಸಣ್ಣದೂ ಆಗಿರುವ ಒಬ್ಬ ಹುಡುಗ, ಈ ಮೂರು ಜನರ ಊಟದ ಪ್ರಶ್ನೆ ಇರುತ್ತದೆ. ಅದಕ್ಕಾಗಿ ಕೆಲಸ ಮಾಡುತ್ತೇವೆಂದು ಬರುತ್ತಾರೆ. ಈ ಔದಾರ್ಯವನ್ನು ತಾವೂ, ಮಾಲೀಕರು ಬಹಳ ರೀತಿಯಲ್ಲಿ ಶೋಷಣೆ ಮಾಡಿ ಅವರಿಗೆ ಅನ್ನ ಕೊಡುವ, wages ಕೊಡುವ ನೆಪದಿಂದ ಅವರನ್ನು ಸ್ಮಶಾನಕ್ಕೆ ಬೇಗ ಬೇಗ ಸಾಗಿಸುವುದಕ್ಕೆ

(ಶ್ರೀ ಎಸ್. ಗೋಪಾಲಗೌಡ)

ಸಹಾಯ ಮಾಡಿದಂತಾಗುತ್ತದೆಯೇ ಹೊರತು ಅವರಿಗೆ ಕೂಲಿ ಕೊಟ್ಟಂತಾಗುವುದಿಲ್ಲ. ಅವನು Sanatoriumನಲ್ಲಿ ಇರಬೇಕಾದವ, ಅವಳು ಹೆರಿಗೆ ಆಸ್ಪತ್ರೆಯಲ್ಲಿ ಇರಬೇಕಾದವಳು, ಹುಡುಗ ಶಾಲೆಯಲ್ಲಿ ಇರಬೇಕಾದವನು, ಈ ಮೂರು ಜನಗಳಿಗೆ ದೊಡ್ಡ ನೌಕರಿ ಕೊಟ್ಟಾಂತಾಯಿತು, ನಿಮಗೆ ಶಹಭಾಸ್‌ಗಿರಿ ಬಂತು. ಅವರು ಈ ದೇಶದ ಎಲ್ಲ ಕಾನೂನು ಕಾಯಿದೆಗಳಿಗೆ ಹೊರತಾಗಿ ಸತ್ತುಹೋದಂತೆ ಆಯಿತು. ಕಾನೂನು ಮಾಡದೇ ಇದ್ದರೂ ಇಷ್ಟೇ ಆಗುತ್ತದೆ. ಆದುದರಿಂದ ರಜಾ ದಿವಸಗಳ ವಿಷಯದಲ್ಲಿ ಸರಕಾರ ಇದುವರೆಗೂ ರಜಾ ಎಂದು ಎಲ್ಲರಿಗೂ ಕೊಡುತ್ತಾರೆ. ಕಾನೂನು ಮಾಡುತ್ತಾರೆ, ಆದರೆ ಅದರಂತೆ ಜಾರಿಗೆ ಕೊಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನಾಗಲೇ ಹೇಳಿದ ಹಾಗೆ ರಜಾ ದಿವಸಗಳ ಬಗ್ಗೆ "ಮೇ ಡೇ" ಮತ್ತು "ಗಾಂಧೀ ಜಯಂತಿ"ಯ ದಿನ ರಾಷ್ಟ್ರಾದ್ಯಂತ ಕೆಲಸಮಾಡುವ ಹಾಗಿಲ್ಲ ಎಂದು ರಾಜ್ಯ ಸರಕಾರಗಳವರು ಕೇಂದ್ರದವರಿಗೂ ಸ್ವಲ್ಪ ಹೇಳಬಹುದು. ಜವಾಬುದಾರಿಯನ್ನು ಹೊತ್ತಿರುವ ಸರಕಾರ ಪರಿಶೀಲನೆ ಮಾಡಿ ಎಂದು ಹೇಳಿ ಸರಿಪಡಿಸಬೇಕು. ಅವರಿಂದಲೇ ಆಗಿರುವ I.N.T.U.C. ಗಾಂಧೀಜಿ ಹಾಗೂ ರಾಜಘಾಟಿನ ವಿಷಯ ಬಂದಾಗ ನೀವು ಏನನ್ನು ಹೇಳಲು ಅಸಹಾಯಕರಾಗಿರುತ್ತೀರಿ.

11-30 A.M.

Mr. SPEAKER.—The Hon'ble Member has said enough about implementation.

ಶ್ರೀ ಎಸ್. ಗೋಪಾಲ ಗೌಡ.—ತಾವೇ ಈ ಬಗ್ಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕು.

Mr. SPEAKER.—Implementation does not come under the Bill.

ಶ್ರೀ ಎಸ್. ಗೋಪಾಲ ಗೌಡ.—ಇಷ್ಟು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The Hon'ble Member has referred to Legislators' Home and certain persons working all the 24 hours at a stretch. Will he kindly send a letter mentioning the name........

ಶ್ರೀ ಎಸ್. ಗೋಪಾಲ ಗೌಡ.—ಗೃಹಕೃತ್ಯಕ್ಕೆ ಸಂಬಂಧಪಟ್ಟ ವಿಷಯವನ್ನೂ ಯಾವುದೂ ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ನಾನಾಗಲೇ ಇದರ ಬಗ್ಗೆ ಕಾಗದ ಬರೆದಿದ್ದೇನೆ.

Mr. SPEAKER.—Any way I will look into it. If he has already written, he need not do it again.

Sri S. RAJAGOPAL (K. G. F.).—Better late than never. I wholeheartedly welcome this Bill placed by the Labour Minister in connection with national and festival holidays. Both the Honourable Members that spoke now have given their opinion on this Bill, particularly with regard to declaration of May Day and Gandhi Jayanthi also to regard as compulsory holidays. Particularly, I want to mention about Gandhi Jayanthi. While we have accepted Gandhiji as the Father of the Nation, I cannot understand why we hesitate to declare the birth day of this great man as a holiday. When our Minister for Labour explained the scope of the Bill, he has given certain reasons as to why this MAY DAY and GANDHIJI'S BIRTHDAY were not declared as holidays. Whatever may be the reasons, Sir, I cannot understand why this Government is not in a position to take initiative independent of the AITUC, INTUC or the HMS to declare Gandhiji's birthday as holiday also. I wonder Sir, whether it is because the Ruling Party have been thinking of having the

sole benefit of his name; they have not come forward to declare it as a holiday for labour. That is what I mean. Because they do not want to believe in the name of Gandhiji as father of the nation. Because if it is declared a holiday then the other organisations are also in a position to use Gandhiji's name and benefit by it. The Ruling Party does not want that others should use that name. By keeping in view that only, particularly the Government and the Congress Party is not prepared to declare Gandhiji's birthday as a compulsory holiday. What I feel is that, because even before the General Election, our Central Government and State Government had been kind enough to declare Gandhiji's birthday as a general holiday for labour but the very next year it has been stopped. For what purpose it has been stopped, we do not know. It has created a big sensation in the workers as to why one year they should be observing Gandhiji's birthday as a holiday and afterwards, why they should take away. You yourself are making Gandhi as a controversial figure before the workers. While you are using Gandhiji's name for election purpose and while you are using his name for several other purposes, why should you declare Gandhiji's Birthday as a holiday for one year and in the following year you have forgotten to declare it? What is the reason? Why are you not in a position to declare it a holiday? Any how, even now it is not too late; you can consider the proposition favourably and declare this day as a compulsory holiday so that every worker in every factory may also know that we are struggling for national integrity.........

Sri D. DEVARAJ URS.—I have before me, a private Member's Bill which was not admitted. Of course the Member who sponsored that Bill happens to be a Member of his own party. I should like to ask him, as to why he did not include this in the Bill which is proposed?

Sri S. RAJAGOPAL.—Whatever may be the view of our Party or its policy, why, as Government, you are not in a position to take the initiative and responsibility?

Sri D. DEVARAJ URS.—It is not a question of Government taking responsibility, Sir. It is difficult to know whether all parties among the workers would unanimously like it or whether there are differences?

Sri S. RAJAGOPAL.—You should not mind other things. Why you are not in a position to make others also feel that they should also observe it as a compulsory national holiday?

Sri D. DEVARAJ URS.—If he is also prepared to convert all workers to the point of congressmen, we have no objection.

Sri S. RAJAGOPAL.—Gandhiji is not your man. He is the Father of the Nation.

Sri D. DEVARAJ URS.—Then you should have agreed at the beginning itself. Now that you have said we will think of it.

Sri S. RAJAGOPAL.—If any Member of your organisation is having that notion, it is the responsibility of the Government to wipe out that notion itself.

Mr. SPEAKER.—Proceed to the next point.

Sri S. RAJAGOPAL.—Yes, Sir. Why the Congress Party alone should use Gandhiji's name for its own benefit? They put the blame on some other organisation and on some other individual and they want to take shelter under that.

Sri D. DEVARAJ URS.—I am not blaming them for that. If my friend chooses to blame the Government, then my reply is this. I have not chosen to blame you for that.

Sri S. RAJAGOPAL.—While you are using Gandhiji's name as your weapon, you are trying to deny it to others. That should not be the motive.

Mr. SPEAKER.—Yes, please proceed to the next point. Is the Hon'ble Member supporting the Bill and suggesting that some more holidays may be added?

Sri S. RAJAGOPAL.—Yes, Sir.

Mr. SPEAKER.—He has made the suggestion very clearly.

Sri S. RAJAGOPAL.—About MAY DAY also, Hon'ble Members have said that. I request the Government to kindly consider that aspect also.

Under penalties,—8—it is said that the fine imposed for any contravention of the law is Rs. 25 and that for the second and subsequent offences, the fine is Rs. 250. It is not adequate Sir. So, I request the Hon'ble Minister to increase the amount and see that the employers also have their full share of punishment if there is any offence committed in this respect. Otherwise, it would be very small punishment.

In clause 9 it is said: Whoever wilfully obstructs the Inspector etc. This is also a little vague. It may even be that the employer can escape by putting the blame on some clerk or whoever it may be, subordinate to him. That should not happen. The employer should be responsible for whatever obstruction that may occur.

Mr. SPEAKER.—'Whoever' includes the employer also.

Sri S. RAJAGOPAL.—I am afraid that it may give scope to throw the blame on somebody else. There also the punishment is not much.

Sri D. DEVARAJ URS.—It is for the courts to decide.

Sri S. RAJAGOPAL.—Sir, we have the experience that no employer is convicted and sent to jail. He will be prepared to give even one lakh of fine. So, it must be enhanced. Then about exemption. It has also to be clarified strictly. When we are giving some exemption, it must be followed in some strict way. Even the implementing authorities are misusing it and the employers are taking protection under this. The implementing authorities should implement it strictly. With these remarks I whole-heartedly welcome this Bill and I thank the Labour Minister for having brought this measure.

Mr. SPEAKER.—The time fixed by the Business Advisory Committee expires; It will extend it by half-an-hour more.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಮಸೂದೆಯ ಎಂಟನೆ ಕ್ಲಾಜಿನಲ್ಲಿ ಈ ರೀತಿ ಇದೆ—" for the first offence, it may extend to twenty-five rupees and for

a second and Subsequent offences may extend to two hundred and fifty rupees.'' ಇದರಲ್ಲಿಯ 250 ರೂಪಾಯಿಯವರೆಗೆ ಇರುವುದನ್ನು ತೆಗೆದುಹಾಕಿ, ಇನ್ನು ಡಿಟೆರೆಂಟ ಆಗಿರಬೇಕು. Penalty should be so many days production ಎಂದು ಮಾಡಿ ಅಷ್ಟು ದಿವಸ ಕೆಲಸ ಮಾಡಲು ನಿಯಮ ಮಾಡಬೇಕು. ಇಷ್ಟು ರೂಪಾಯಿ ಎಂದು ಇರುವದರ ಬದಲು, ಒಂದು ದಿವಸ, ಹತ್ತು ದಿವಸ, ಹದಿನೈದು ದಿವಸ ಕೆಲಸ ಮಾಡಬೇಕು ಎಂದು ಈ ಕಾಲಮಿನಲ್ಲಿ ಹಾಕಿದರೆ ಒಳ್ಳೆಯದಾಗುತ್ತದೆ.

ಇನ್ನು clause 5 wages' (2) '' Where an employee works on any holiday allowed under Section 3, he shall, at his option, be entitled to

ಇದರಲ್ಲಿರುವ at his option ಎಂದು ಇರುವುದಕ್ಕೆ I take objection.

(*a*) twice the wages; or.

(*b*) Wages for such day and to avail himself of a substituted holiday with wages on any other day............''

ನನಗೆ ಹೀಗೆ ಅನಿಸುತ್ತದೆ. ಈ ರೀತಿ ಮಾಡುವದರ ಬದಲಾಗಿ ರಜ ದಿವಸ ಕೆಲಸ ಮಾಡಿದರೆ ಆ ದಿವಸ ಅವನಿಗೆ ಡಬ್ಬಲ್ ವೇಜಿಸ್ ಕೊಡುವದಲ್ಲದೆ ಇನ್ನೊಂದು ದಿವಸ ಹೋಗಿ ಕೆಲಸ ಮಾಡಲು ಅವಕಾಶ ವಿದ್ದು ಅಂದು ನಾರ್ಮಲ್ ವೇಜಿಸ್ ಕೊಡುವುದು ಸೂಕ್ತ ಎಂದು ಕಾಣುತ್ತದೆ. ರಜ ದಿವಸ ಕೆಲಸ ಮಾಡಿದರೆ ಎರಡು ದಿನದ ವೇಜಿಸ್ ಕೊಡಬೇಕೆಂದು ಇರುವುದು ಸರಿಯಾಗಿದೆ. ಇನ್ನೊಂದು ದಿವಸ ರಜ ತೆಗೆದುಕೊಳ್ಳುವಾಗ್ಗೆ, ನಾರ್ಮಲ್ ವೇಜಿಸ್ ಮಾತ್ರ ಸಿಕ್ಕುತ್ತದೆ. ಇದು ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಇದನ್ನು ಸ್ಪಷ್ಟಪಡಿಸಬೇಕು.

ಇನ್ನೊಂದು ವಿಷಯ, ಶ್ರೀಮಾನ್ ಗೋಪಾಲಗೌಡರು ಒಂದು ಮಾರ್ಮಿಕವಾದ ಮಾತು ಹೇಳಿದರು. ಗಾಂಧೀಜಿಯವರು ಎಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ಆದುದರಿಂದ ಅವರ ಹುಟ್ಟು ಮತ್ತು ಸಾವು ಈ ಎರಡುದಿನ ರಜ ಇರಬೇಕು ಎಂದು ನನಗೆ ಅನ್ನಿಸುತ್ತದೆ. ಇವೆರಡು ರಜ ದಿನ ಎಂದು ಮೊದಲೇ ಮಾಡಬೇಕಾಗಿತ್ತು. ಇದು ಇರದೇ ಇರತಕ್ಕಂಥಾದ್ದು ದೊಡ್ಡ ನ್ಯೂನತೆಯಾಗಿದೆ.

ಇನ್ನೊಂದು ವಿಷಯ ಹೇಳಬೇಕೆಂದಿದ್ದೇನೆ. ಅದನ್ನು ಗಂಭೀರವಾಗಿ ವಿಚಾರ ಮಾಡಬಹುದು. ಇಲ್ಲವೆ ಲಘುವಾಗಿ ತೆಗೆದುಕೊಳ್ಳಬಹುದು. ಗಾಂಧೀಜಿಯವರು ಗಾಂಧಿ ಟೋಪಿ ಮಾಡಿದರು. ಸ್ವಾತಂತ್ರ್ಯ ಬರುವದಕ್ಕೆ ಮೊದಲು ಪರದಾಸ್ಯದಲ್ಲಿ ದೇಶವೆಲ್ಲಾ ಒಂದು ದೊಡ್ಡ ಜೇಲು ಆಗಿತ್ತು, ಇಂಡಸ್ಟ್ರಿಯಲ್ ಮುಂದುವರಿಯಲು ದಾರಿ ಇರಲಿಲ್ಲ, ಎಲ್ಲರೂ ಕೈದಿ ಆಗಿದ್ದೇವೆ ಎನ್ನುವುದನ್ನು ಸೂಚಿಸುವದಕ್ಕಾಗಿ ಗಾಂಧಿ ಟೋಪಿ ಮಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 15 ವರ್ಷಗಳಾಯಿತು ಈ ಗಾಂಧೀ ಟೋಪಿ ತೆಗೆದುಹಾಕಬೇಕು. ಗಾಂಧೀಜಿಯವರು ಇಂದು ಬದುಕಿದ್ದರೆ ಖಂಡಿತವಾಗಿ ಇದನ್ನು ಮಾಡುತ್ತಿದ್ದರು.

Mr. SPEAKER.—That point should be developed elsewhere please come to the point ' Cap ' does not come here.

ಶ್ರೀ ವಿ. ಎಂ. ದೇವ್.—ನಾನು ಹೇಳುವುದು ಇಷ್ಟೇ. ಐದು ರಜ ದಿನಗಳ ಜೊತೆಗೆ ಈ ಎರಡು ರಜ ದಿನ ಸೇರಿಸಬೇಕು. '' Provided that no such employee shall be entitled to be paid any wages for any of the holidays allowed under Section 3,...... if he has not completed a period of thirty days continuous service immediately preceding such holiday....'', ಇದರಲ್ಲಿ 30 ದಿವಸ ಕಂಟಿನ್ಯೂಯಸ್ ಆಗಿ ಸರ್ವಿಸ್ ಇಲ್ಲದೇ ಇದ್ದರೆ, ಅಂಥ ರಜ ದಿನಕ್ಕೆ ವೇಜಿಸ್ ಕಟ್ ಮಾಡಲುದಾರಿ ಇದೆ ಎಂದು ಹೇಳಲಾಗಿದೆ. ಇದು ಅಷ್ಟು ಸಮಂಜಸ ಕಾಣುವದಿಲ್ಲ. ಮಂತ್ರಿಗಳು ಉತ್ತರ ಕೊಡುವಾಗ್ಗೆ, ಇದರ ವಿವರಣೆ ಕೊಡಬೇಕೆಂದು ಹೇಳುತ್ತೇನೆ. ರಜ ಕೊಡುವ ಮೂಲ ತತ್ವಕ್ಕೆ ನಾನು ಬೆಂಬಲ ನೀಡುತ್ತೇನೆ.

† ಶ್ರೀ ಎ. ಶರಣಪ್ಪ (ದೇವದುರ್ಗ).—ಸ್ವಾಮಿ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತಾ, ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಈ ಚುಟ್ಟೀ ದಿನಗಳಲ್ಲಿ ಮಾನ್ಯ ಸದಸ್ಯರುಗಳು ಮಹಾತ್ಮಗಾಂಧಿ ಹುಟ್ಟಿದ ದಿನ ಮತ್ತು ಮರಣದ ದಿನ ಸೇರಿಸುವ ಬಗ್ಗೆ ಒಂದು ಹೃತ್ಪೂರ್ವಕವಾದ ಸಲಹೆಯನ್ನು ಇಟ್ಟಿದ್ದಾರೆ. ಅದನ್ನು ನಾನು ಕೂಡ ಸ್ವಾಗತಿಸುತ್ತಾ ಇದ್ದೇನೆ.

(ಶ್ರೀ ಎ. ಶರಣಪ್ಪ)

ಇವರ ಜೊತೆಗೆ ಅನೇಕ ದಿನಗಳಿಂದ ನಮ್ಮೆಲ್ಲರಿಗೂ ಕನಸಾಗಿದ್ದ ಈ ಕನ್ನಡ ನಾಡನ್ನು ಕಟ್ಟಿದ್ದೇವೆ ನವೆಂಬರ್ ಮೊದಲನೇ ತಾರೀಖು ಕನ್ನಡಿಗರೆಲ್ಲರ ನೆನಪಿನಲ್ಲಿದೆ. ಇದು ಅನೇಕ ದಿನಗಳವರೆಗೆ ಕಾರ್ಮಿಕರೆಲ್ಲ ಮರೆಯಲಾರದಂತೆ ಉಳಿಯುವ ಪ್ರಸ್ಕರ, ಈ ದಿನವನ್ನೂ national and festival holidays ಒಳಗೆ ಸೇರಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಸಲಹೆ ಕೊಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮಾನ್ಯ ಸದಸ್ಯರುಗಳು ಮಾತನಾಡಿದಂಥವರು ಈ ಮಸೂದೆಗೆ ಮೂಲತಃ ಬೆಂಬಲ ಕೊಟ್ಟು ಕೆಲವು ಸಲಹೆಗಳನ್ನು ನೀಡಿದ್ದಾರೆ. ಅದಕ್ಕಾಗಿ ನನ್ನ ಅಭಿನಂದನೆಗಳು.

ಶ್ರೀ ಮಾರ್ಕ್ ದೇವ್‌ರವರು ಮಾತನಾಡುತ್ತಾ, 5ನೇ ಕಲಮ್ ಬಗ್ಗೆ ಸ್ವಲ್ಪ ಅನುಮಾನ ವ್ಯಕ್ತಪಡಿಸಿದರು. ಯಾವನಾದರೂ ಒಬ್ಬ ಕಾರ್ಮಿಕ ಗೊತ್ತಾದಂಥ ರಜಾದಿನ ಕೆಲಸ ಮಾಡುವ ಮೊದಲು ಮಾಲೀಕನೊಂದಿಗೆ ಒಪ್ಪಂದ ಮಾಡಿಕೊಂಡು ಕೆಲಸ ಮಾಡಬಹುದು, ಈ ಒಪ್ಪಂದವಿಲ್ಲದ ಭಾಗದಲ್ಲಿ ಕೆಲಸಕ್ಕೆ ಹೇಳುವುದಕ್ಕೆ ಸಾಧ್ಯವಿಲ್ಲ. ಹಿಂಸೆ ಮಾಡಿ ರಜಾದಿನಗಳಲ್ಲಿ ಕಾರ್ಮಿಕನ ಕೈಲಿ ಕೆಲಸ ಮಾಡಿಸುತ್ತಾ ಇದ್ದರೆ, ಮಾಲಿಕ ಶಿಕ್ಷೆಗೆ ಗುರಿಯಾಗುತ್ತಾನೆ. ಒಂದು ವೇಳೆ ರಜಾ ದಿವಸಗಳಲ್ಲಿ ಇಬ್ಬರೂ ಒಪ್ಪಿ ಕೆಲಸ ಮಾಡಿದರೆ ಏನು ಮಾಡಬೇಕೆಂಬುದು ಇದರಲ್ಲಿರತಕ್ಕಂಥ ವಿಚಾರ. ಇವರಿಬ್ಬರೂ ಒಪ್ಪಿ ಕೆಲಸ ಮಾಡುತ್ತಾ ಇದ್ದರೆ, ಈ ರಜಾ ದಿವಸದಲ್ಲಿ ಕಾರ್ಮಿಕ double wagesಗೆ ಹಕ್ಕುದಾರನಾಗುತ್ತಾನೆ ಅಂತ ಇದೆ. Duble the wages ಒಂದು ವೇಳೆ ಆ ದಿವಸ ಕೊಡದೆ ಕೆಲಸ ಮಾಡಿಸಿದರೆ. ಅವತ್ತಿಗೆ ಎರಡು ದಿವಸದ ವೇತನಗಳನ್ನು ಪಡೆಯಬಹುದು ಕಲಮ್ 5 (2 (a) ಪ್ರಕಾರ; ಅಥವ 5 (2) (b) ಪ್ರಕಾರ he is entitled to wages for such day and to avail himself of a substituted holiday with wages on any other day, ಈ ಸೆಕ್ಷನ್ನಿನ (a) and (b) ಕಾರ್ಮಿಕನ ಒಂದು ಅನುಕೂಲಕ್ಕಾಗಿ ಮಾಡಿದೆ; ಈ ಎರಡು ಕ್ಲಾಸುಗಳಲ್ಲಿ ಯಾವುದಾದರೂ ಒಂದರ ಸೌಕರ್ಯವನ್ನು, ಅವನ ಅನುಕೂಲತೆಗೆ ತಕ್ಕಂತೆ ಉಪಯೋಗಿಸಿಕೊಳ್ಳಬಹುದು. ಕಾರ್ಮಿಕ ಸೆಕ್ಷನ್ (3) ಹಾಲಿಡೇಗೆ ಬದಲಾಗಿ ಇನ್ನೊಂದು ದಿವಸ, ತನಗೆ ಹಾಲಿಡೆ ಬೇಕು ಅಂತ ದಿವಸ ತೆಗೆದುಕೊಳ್ಳಬಹುದು; ಹಾಲಿಡೆ ತೆಗೆದುಕೊಳ್ಳುವ ಆಪ್‌ಷನ್ನನ್ನು ಕಾರ್ಮಿಕರಿಗೇ ಬಿಟ್ಟಿದೆ; ಇದನ್ನು ಕಾರ್ಮಿಕರ ಹಿತದೃಷ್ಟಿಯಿಂದ ಮಾಡಿದೆಯೇ ಹೊರತು, ಇದನ್ನು ಮಾಲಿಕನು ಯಾವ ರೀತಿಯಲ್ಲಿಯೂ ದುರುಪಯೋಗಪಡಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಈ ಕಾನೂನನ್ನು ಜಾರಿಗೆ ತರುವುದಕ್ಕೆ ಇನ್‌ಸ್ಪೆಕ್ಟರುಗಳು ಇದ್ದಾರೆ; ಕಾನೂನು ರೀತ್ಯ ಹಾಲಿಡೇಗಳನ್ನು ಮಾಡದೆ ಇರತಕ್ಕಂಥಾದ್ದನ್ನು ಈ ಇನ್‌ಸ್ಪೆಕ್ಟರುಗಳು ನೋಡಬೇಕು; ತಪ್ಪಾಗಿದ್ದರೆ ಕಾನೂನು ಜರುಗಿಸಬೇಕು. ಕಾನೂನು ಜರುಗಿಸಿದರೂ ಅದರ ಸಂದಿಯಲ್ಲಿ ತಪ್ಪಿಸಿಕೊಳ್ಳಬಹುದೆಂದರೆ, ಕಾನೂನು ಇಲ್ಲದೆ ಇದ್ದರೆ ತಪ್ಪಿಸಿಕೊಳ್ಳಬಹುದು. ಈಗ ನಾನು ಕೊಟ್ಟಿರುವ ವಿವರಣೆಯಿಂದ ನನ್ನ ಮಾನ್ಯ ಮಿತ್ರರು ಸಮಾಧಾನ ಪಟ್ಟುಕೊಟ್ಟಿದ್ದಾರೆ ಅಂತ ಭಾವಿಸುತ್ತೇನೆ.

ಶ್ರೀ ಪಿ ಎಂ. ದೇವ್.—ತಾವು ಸಂಬಂಧಪಟ್ಟ ಸೆಷನ್ನನ್ನು ಇನ್ನೂ ಸ್ವಲ್ಪ ಬಂದೋಬಸ್ತ್ ಮಾಡುವುದಕ್ಕೆ ಆಗುವುದಿಲ್ಲವೇ? ಮಾಲೀಕನಿಗೆ ಬೇಕಾಗಿರುವುದು ಲಾಭ ಒಂದೇ. ಈ ದೃಷ್ಟಿಯಿಂದ ಅವನು ಅವನಿಗೆ ಬೇಕಾದಂಥ ಒಪ್ಪಂದಕ್ಕೆ ಕಾರ್ಮಿಕ ಒಪ್ಪಿಕೊಂಡಿದ್ದಾನೆ ಎಂದು ಹೇಳಬಹುದು,

Mr. SPEAKER.—That is a provision for extraordinary circumstance. Supposing such a thing happens, then this would be the provision.

ಶ್ರೀ ಪಿ. ಎಂ. ದೇವ್.—ಇನ್ನೊ ಯೋಚನೆಮಾಡಿ.

ಶ್ರೀ ಡಿ. ದೇವರಾಜ ಅರಸ್. ಆಗಲಿ ಮಾಡೋಣ. ಇನ್ನೊಂದು ಮುಖ್ಯವಾದಂಥ ವಿಚಾರ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದ್ದು ಅಂದರೆ, ಈ ರಜಾ ದಿವಸಗಳನ್ನು ಗೊತ್ತುಮಾಡಿರತಕ್ಕಂಥ ವಿಚಾರದಲ್ಲಿ ' May day'' ಅನ್ನತಕ್ಕಂಥಾದ್ದನ್ನು ಪ್ರಪಂಚದ ಎಲ್ಲ ಕಾರ್ಮಿಕರೂ ಇದನ್ನು ಒಪ್ಪತಕ್ಕಂಥಾದ್ದು ಎಂದು ಇದನ್ನು ರಜಾ ದಿನವಾಗಿ ಏಕೆ ಮಾಡಲಿಲ್ಲ ಅನ್ನುವುದನ್ನು ಶ್ರೀ ಸಂಜೀವನಾಥರು, ಶ್ರೀ ಗೋಪಾಲಗೌಡರು ಮತ್ತು ಶ್ರೀ ರಾಜ ಗೋಪಾಲ್‌ರವರು ಮತ್ತು ಎಲ್ಲರೂ ಹೇಳಿದ್ದಾರೆ.

Mr. SPEAKER.—Is it provided in any other state?

Sri D. DEVARAJ URS.—Excepting Kerala no other state has provided for it, as far as my knowledge goes.

ಶ್ರೀ ಡಿ. ದೇವರಾಜ ಅರಸ್.—ಇದು ಒಂದನ್ನು ಎಲ್ಲರೂ ಸರ್ವಸಮ್ಮತವಾಗಿ ಒಪ್ಪಲಿ ಅಂತ ಹೇಳಿದರು ; ಒಪ್ಪದೆ ಇದ್ದರೂನೂ ನಿಮ್ಮ ಕಾನೂನಿನಲ್ಲಿ ಚಲಾಯಿಸಲಾಗದೇ ಎಂದು ಒಂದು ವಾದ. ಒಟ್ಟಿನಲ್ಲಿ ಕಾನೂನು ರಚನೆಯಾಗಿರತಕ್ಕಂಥಾದ್ದು ಕಾರ್ಮಿಕರ ದೃಷ್ಟಿಯಿಂದ. ಅವರಿಗೆ ಕೆಲವು ರಕ್ಷಣೆ ಕೊಡುವ ದೃಷ್ಟಿಯಿಂದ, ಅವರಿಗೆ ಯಾವ ರಜಾದಿನಗಳು ಆಗಬಹುದು ಎಂದು ತೀರ್ಮಾನಕ್ಕೆ ಬರುವುದಕ್ಕೆ ಅವಕಾಶ ಕೊಟ್ಟಿದೆ, ಅವಕಾಶ ಕೊಟ್ಟರೆ ಏಕೆ ಕೊಟ್ಟಿರಿ ಅಂತ ಪ್ರಶ್ನಿಸುತ್ತೀರ ; ಅವಕಾಶ ಕೊಡದಿದ್ದರೆ ಏತಕ್ಕೆ ಕೊಡಲಿಲ್ಲ ಅನ್ನುತ್ತೀರ. ಹೀಗೆ ಮಾತನಾಡಿದರೆ ನಾನು ಏನು ಹೇಳಬೇಕೋ ಅರ್ಥವಾಗಿಲ್ಲ. ಶ್ರೀಮಾನ್ ಗೋಪಾಲಗೌಡರು ಅಪ್ಪಣೆ ಕೊಡಿಸಿದ ಹಾಗೆ ಒಂದು ವೇಳೆ ಕಾರ್ಮಿಕರೆಲ್ಲರ ಮುಖಂಡರುಗಳು, ಅವರ ಸಂಸ್ಥೆಗಳಾದ I. N. T. U. C, Hind Mazdoor Sabha, A. I. T. U. C., ಒಪ್ಪದೆಹೋದರೂ, ಅವರಲ್ಲಿಯೇ ರಾಯಿಕ್ಯಾದ ಜನರು ಅಗಲಿ ಅಂತ ಹೇಳುವುದಾದರೆ ನನ್ನ ಜವಾಬ್ದಾರಿಯಾಗಲಿ, ಸರ್ಕಾರದ ಜವಾಬ್ದಾರಿಯಾಗಲಿ ಇಲ್ಲ. ಒಂದು ವೇಳೆ ಶ್ರೀಮಾನ್ ಗೋಪಾಲಗೌಡರು ಹೇಳಿದ ವಿವೇಕವಾಣಿಯನ್ನು ಎಲ್ಲಾ ಸಂಸ್ಥೆಯವರೂ ಕೇಳಿ, ತಿಳಿದುಕೊಂಡು, ಎಲ್ಲರೂ May Day ಅನ್ನುವುದನ್ನು ರಜಾ ದಿನವಾಗಿ ಪರಿಗಣಿಸಬೇಕು ಅಂತ ಹೇಳಿದರೆ, ತೀರ್ಮಾನಮಾಡಿದರೆ, ಅದಕ್ಕೆ ಸರ್ಕಾರ ಏನೂ ಅಡ್ಡಿ ಬರುವುದಿಲ್ಲ, ಅದನ್ನು ಸ್ವಾಗತಿಸುತ್ತದೆ. ಬೇಕಾದರೆ ಒಂದು ಅಮೆಂಡ್‌ಮೆಂಟನ್ನು ತಂದು, ಅದನ್ನು ಕಾನೂನಿನಲ್ಲಿ ಅಡಕ ಮಾಡುವುದಕ್ಕೆ ಸರ್ಕಾರದ್ದು ಯಾವ ಅಭ್ಯಂತರವೂ ಇಲ್ಲ. ಬೆವರಿರಿಲ್ಲದೇನೇ ಸರ್ಕಾರದವರು ಈ ಕಾನೂನಿನಲ್ಲಿ, ಈ ಸಭೆಯ ಮೂಲಕ ಇದನ್ನು ಕಾರ್ಮಿಕರ ಮೇಲೆ ನ್ಯಾಯವಾಗಿ ಒತ್ತಾಯಮಾಡುವುದು ಬೇಡ ಅನ್ನುವ ದೃಷ್ಟಿಯಿಂದ ಮಾತ್ರ ಆ ದಿವಸವನ್ನ ಇಹ ಸೇರಿಸುವುದು ಬಿಟ್ಟಿದೆ. ನಾನು ಮೊದಲೇ ಅರಿಕೆ ಮಾಡಿದ ಹಾಗೆ ಕಾರ್ಮಿಕರೆಲ್ಲರೂ ಸೇರಿ ಅಥವಾ ಬಹುಜನ ಯಾವುದಾದರೂ ಸಂಸ್ಥೆಯವರು ಸೇರಿ May Day, ಹಾಲಿಡೆ ಆಗಿ ಪರಿಗಣಿಸಬೇಕು ಎಂದು ತೀರ್ಮಾನ ಮಾಡಿಕೊಂಡರೆ. ಅದಕ್ಕೆ ಮಾನ್ಯತೆ ಕೊಡುವುದಕ್ಕೆ ಯಾವ ಅಡ್ಡಿ ಇಲ್ಲ.

ಶ್ರೀ ವಿ. ಎಂ. ದೇವ್.—ನೀವು ರೂಲಿಂಗ್ ಪಾರ್ಟಿಯವರೇ ಒಂದು ಲೇಬರ್ ಆರ್ಗನೈಸೇಷನ್ ಮಾಡಿಕೊಂಡು, ನೀವೇ ಹೇಳಲಿಲ್ಲವಲ್ಲಾ ?

ಶ್ರೀ ಡಿ. ದೇವರಾಜ ಅರಸ್.-ಮತ್ತೆ ಇನ್ನೊಂದು ಅಂಶ. ಗಾಂಧೀಜಿಯವರು ಹುಟ್ಟಿದ ಮತ್ತು ಸತ್ತ ದಿವಸಗಳನ್ನು ರಜಾದಿನಗಳಾಗಿ ಘೋಷಿಸಲಿಲ್ಲ ಎಂಬತಕ್ಕಂಥ ಆಕ್ಷೇಪಣೆ ಬಹಳ ಸಡಿಲವಾಗಿ ಶ್ರೀಮಾನ್ ಗೋಪಾಲಗೌಡರು ಎತ್ತಿದರು. ಅಕ್ಟೋಬರ್ 2ನೇ ತಾರೀಖನ್ನು ಪಬ್ಲಿಕ್ ಹಾಲಿಡೆ ಆಗಿ ಪರಿಗಣಿಸಬೇಕು ಅಂತ ಹೇಳಿ ಸರ್ಕಾರ ಎಲ್ಲಕ್ಕೂ ಅನ್ವಯಿಸುವ ರೀತಿ ಆಜ್ಞೆ ಮಾಡಿದೆ. ಇದರಲ್ಲಿ ನಾವು ಖಾಸಗಿ ಸಂಸ್ಥೆಗಳು, ಔದ್ಯೋಗಿಕ ಸಂಸ್ಥೆಗಳು ಮತ್ತಿತರ ಸಂಸ್ಥೆಗಳನ್ನೂ ಇದನ್ನು ನೀವು ಅನುಸರಿಸಬೇಕೆಂತ ಹೇಳಿ ಆಜ್ಞೆಯಲ್ಲಿ ಕೇಳಿಕೊಂಡಿದ್ದೇವೆ. ಒಂದು ವೇಳೆ ನಾವು ಕಡ್ಡಾಯವಾಗಿ ಈ ದಿವಸವನ್ನು ರಜಾದಿವಸವಾಗಿ ಪರಿಗಣಿಸಬೇಕು ಎಂದು ಹೇಳಿದಿರಿ, ಏಕೆ ಬಲವಂತವಾಗಿ ಹೇಳುತ್ತೀರ ಎಂದು ಸರ್ಕಾರದಮೇಲೆ ಆರೋಪ ಮಾಡುತ್ತೀರ; ಇದನ್ನು ರಾಷ್ಟ್ರೀಯ ದಿನವಾಗಿ ಮಾಡದಿರುವಾಗ, ಗಾಂಧೀಜಿಯವರ ಅನುಯಾಯಿಗಳಾಗಿದ್ದಂಥವರು ಈ ದಿವಸವನ್ನು ಏಕೆ ರಜದಿವಸವಾಗಿ ಘೋಷಿಸಲಿಲ್ಲ ಎಂದು ಹೀಗೆ ಕೇಳುತ್ತೀರ.

ಶ್ರೀ ಎಸ್. ಗೋಪಾಲಗೌಡ.—ಏನೋ ಕೆಟ್ಟ ಗಾಳಿ ಬೀಸುತ್ತಾ ಇದೆ. ಸ್ಪೇಪರ್ ಸುಟ್ಟವಾಸನೆ ಬರುತ್ತಾ ಇದೆ.

Mr. SPEAKER.—I will have it examin d.

ಶ್ರೀ ಡಿ ದೇವರಾಜ ಅರಸ್.—ಸರ್ಕಾರದ ಉದ್ದೇಶ ಗಾಂಧಿ ದಿನ ಆಚರಣೆ ಮಾಡುವುದು ಬೇಡವೆಂದಲ್ಲ, ಸರ್ಕಾರದವರು ಹೊರಡಿಸಿರುವ ಆಜ್ಞೆಯೇ ಹೇಳುತ್ತಿರಬೇಕಾದರೆ. ಅದು ಅಲ್ಲ ಅನ್ನುವುದು ವ್ಯಕ್ತವಾಗುತ್ತದೆ.

12 NOON

ಆದರೆ ಕಾರ್ಮಿಕರು ಈ ದಿವಸವನ್ನು ಕಡ್ಡಾಯವಾಗಿ ಆಚರಿಸಬೇಕೇ, ಬಿಡಬೇಕೇ ಎಂಬ ಮಾತು ಬೇರೆ. ಎಲ್ಲಾ ಕಾರ್ಮಿಕರೂ ಒಪ್ಪಿದರೆ ಬೇರೆ ರೀತಿಯಲ್ಲಿ ಅದನ್ನೂ ಕೂಡ ರಾಷ್ಟ್ರೀಯ ದಿನವಾಗಿ ಆಚರಣೆ ಮಾಡುವುದಕ್ಕೆ ಅವಕಾಶವಾದೀತು. ಕೆಲವರು ಒಪ್ಪಿ ಕೆಲವರು ಬಿಟ್ಟರೆ ಅದು ಕಷ್ಟವಾಗುತ್ತದೆ. ಮತ್ತೊಬ್ಬ ಸದಸ್ಯರು ಕನ್ನಡ ರಾಜ್ಯೋದಯ ದಿವಸವೂ ಕೂಡ ಒಂದು ರಜಾ ದಿನವಾಗಿ ಘೋಷಣೆ ಮಾಡಿ ಎಂದು ಹೇಳಿದರು. ಬುದ್ಧ ಜಯಂತಿ ದಿನ holiday declare ಮಾಡಿ ಎಂದು ಹೇಳುತ್ತಾರೆ. ಮಹಾವೀರ ಹುಟ್ಟಿದ ದಿನ ಜೈನರಿಗೆ ಬಹಳ ಶ್ರೇಷ್ಠವಾದದ್ದು ಅದನ್ನು holiday

(ಶ್ರೀ ಡಿ. ದೇವರಾಜ ಅರಸ್)

ಆಗಿ declare ಮಾಡಿ ಎಂದು ಹೇಳಬಹುದು ಪ್ರತಿಯೊಂದು ದಿವಸವೂ ಒಬ್ಬೊಬ್ಬರಿಗೆ ಇದು ಬಹಳ ಮೇಲು ಆದ ದಿವಸ, ಬಹಳ ಶುಭ ದಿವಸ ಎಂದು ಹೇಳಬಹುದು. ಆದರೆ ಗೋಪಾಲ ಗೌಡರು ಹೇಳುವ ಅರ್ಥದಲ್ಲಿ ಗಾಂಧೀಜಿಯವರನ್ನು ಮಾತ್ರ ಇಡೀ ರಾಷ್ಟ್ರದಲ್ಲಿ ಮಹಾ ವ್ಯಕ್ತಿ ಎಂದು ಪರಿಗಣಿಸಿದ್ದೇವೆ. ಆತ ರಾಷ್ಟ್ರಪಿತ ಅದು ಎಲ್ಲರೂ ಒಪ್ಪತಕ್ಕದ್ದೇ, ಆ ಮಾತನ್ನು. ಗಾಂಧಿ ಜಯಂತಿಯನ್ನು ರಜಾ ದಿವಸ ಎಂದು ಪರಿಗಣಿಸಬಹುದು. ಕಡ್ಡಾಯ ಮಾಡಬೇಕೆಂದು ಅವರು ಹೇಳುತ್ತಾರೆ. ಅದನ್ನು ನಾವು ಇತರರ ಮೇಲೆ ಹೇರಬಾರದು. ಕಾನೂನನ್ನು ಕಡ್ಡಾಯವಾಗಿ ಪರಿಪಾಲಿಸಿ ಎಂದು ಹೇಳುವುದು ಅಷ್ಟು ಉಚಿತವಲ್ಲ ಎಂದು ಕೈ ಬಿಟ್ಟಿದ್ದೇವೆಯೇ ಹೊರತು ಗಾಂಧೀಜಿ ಬಗ್ಗೆ ನಮಗಿರತಕ್ಕ ವಿಶ್ವಾಸ. ಗಾಂಧೀಜಿ ಅವರ ತತ್ವಗಳಲ್ಲಿ ನಂಬಿಕೆ ಕಡಿಮೆಯಾಗಿ ಈ ರೀತಿ ಮಾಡುತ್ತಾ ಇದ್ದೇವೆ ಎಂದು ಏನು ಆಕ್ಷೇಪಣೆ ಮಾಡಿದರು ಅದು ಸರಿಯಲ್ಲ. ಗಾಂಧೀಜಿ ತತ್ವಗಳ ಬಗ್ಗೆ ಎಲ್ಲ ಕಾಂಗ್ರೆಸ್ಸಿಗರಲ್ಲೂ ಒಂದೇ ರೀತಿಯಾಗಿ ನಂಬಿಕೆ ಇದೆ ಎಂದು ಹೇಳುವವರಲ್ಲಿ ನಾನೂ ಒಬ್ಬ. ಯಾರೇ ಆಗಲಿ, ಎಲ್ಲಾ ಕಾಲದಲ್ಲೂ ಎಲ್ಲಾ ಜನರಲ್ಲೂ ಒಂದೇ ಮಟ್ಟದ ನಂಬಿಕೆ ಇರುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಗೋಪಾಲಗೌಡರಂಥವರೂ ಕೂಡ ಗಾಂಧೀಜಿ ಹೇಳಿರತಕ್ಕ ಎಲ್ಲಾ ತತ್ವಗಳನ್ನು ಆಮೂಲಾಗ್ರವಾಗಿ ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಅವರೂ ಕೂಡ ಕೆಲವು ವಿಷಯಗಳಲ್ಲಿ ಅವರದೇ ಆದ ಹಾದಿಯನ್ನು ಇಟ್ಟುಕೊಂಡಿದ್ದಾರೆ, ಹಿಡಿದಿದ್ದಾರೆ, ಮತ್ತು ಪ್ರತಿಪಾದಿಸುತ್ತಾರೆ. ಹೀಗೆ ಯಾವುದೇ ಒಂದು ಕಾಲದಲ್ಲಿ ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ಆಗಲಿ, ತತ್ವಗಳ ಬಗ್ಗೆ ಆಗಲೀ ಒಂದೇ ಸಮಾನವಾದ ನಿಷ್ಠೆಗೆ ಇಲ್ಲಿ ಅವಕಾಶವಿಲ್ಲ ಎಂದು ಹೇಳಿ ಅವರು ವ್ಯಥೆ ಪಟ್ಟರು. ಇದು ಇವತ್ತಿನ ಕಾಲಕ್ಕೆ ಹೊಸದೇನೂ ಅಲ್ಲ. ಅವರು ಉದ್ಧರಿಸಿದ ಹಾಗೆ ಬುದ್ಧನ ಕಾಲದಲ್ಲಿ ಬುದ್ಧನ ತತ್ವವನ್ನನುಸರಿಸಿದ ಜನರು ಕಾಲಾನುಗತವಾಗಿ ಅವರಿಗೆ ಅದರಲ್ಲಿ ನಂಬಿಕೆ ಕಡಿಮೆ ಆಯಿತು ಎಂಬುದನ್ನೂ ಕೂಡ ಹೇಳಿ ಬೇರೆ ರಾಜ್ಯಗಳಲ್ಲಿ ಆ ತತ್ವ ಹೆಚ್ಚು ಪ್ರತಿಪಾದನೆ ಆಯಿತು ಎಂದು ಹೇಳುತ್ತಾ ಇದ್ದಾರೆ, ಯಾವುದೇ ತತ್ವ ಯಾವುದೇ ರಾಜ್ಯದಲ್ಲಿ ಪ್ರತಿಪಾದನೆ ಆಗಿದ್ದರೂ, ಅನುಷ್ಠಾನದಲ್ಲಿ ತರುತ್ತಾ ಇದ್ದರೂ ಸಹ ಈಗ ಬುದ್ಧನ ತತ್ವಗಳನ್ನು ಅನುಸರಿಸುತ್ತಾ ಇರತಕ್ಕ ದೇಶಗಳಲ್ಲಿ ಬುದ್ಧನು ಹೇಳಿದ ರೀತಿಯಲ್ಲಿ ಅನುಸರಣೆ ಮಾಡುತ್ತಾ ಇದ್ದಾರೆಯೇ ಎಂಬುದನ್ನು ಕೂಡ ಅವರು ಹೇಳಬೇಕು. ಇದೇ ರೀತಿ ಕ್ರೈಸ್ತ ಮತಾವಲಂಬಿಗಳು ಇದ್ದಾರೆ. ಕ್ರೈಸ್ತ ಮತ ಅವಲಂಬಿಸಿ ಇರತಕ್ಕ ಈ ಪ್ರಪಂಚದ ಭಾಗದ ಜನ ಕ್ರೈಸ್ತ ಹೇಳಿದ ಪ್ರತಿಮಾತನ್ನು ಅನುಸರಿಸುತ್ತಾ ಇದ್ದಾರೆಯೇ ಎಂಬುದನ್ನು ಹೇಳಬೇಕು. ಇದೇ ರೀತಿ ಪೊಲಿಟಿಕಲ್ ಫೀಲ್ಡ್‌ನಲ್ಲಿ ತೆಗೆದುಕೊಳ್ಳೋಣ. ಮಾರ್ಕ್ಸ್‌ನಂಥ ರಾಜಕೀಯ ಸಿದ್ಧಾಂತವನ್ನು ಅನುಷ್ಠಾನಕ್ಕೆ ತಂದ ಮಹಾ ಸಂತವನಿದ್ದಾನೆ ಆತನ ಅನುಯಾಯಿಗಳು ಒಂದೇ ರೀತಿಯಲ್ಲಿ ಆತ ಬರೆದುದನ್ನು ಅನುಸರಿಸುತ್ತಾ ಇದ್ದಾರೆಯೇ ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು, ಚೈನಾ ದೇಶದವರಿಗೂ, ರಷ್ಯಾ ದೇಶದವರಿಗೂ ಜಿಜ್ಞಾಸೆ ನಡೆಯುತ್ತಾ ಇದೆ, ಒಬ್ಬರು ಮಾರ್ಕ್ಸ್ ಹೇಳಿದುದನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದರೆ ಇನ್ನೊಬ್ಬರು ಮಾರ್ಕ್ಸ್ ಮತ್ತು ಲೆನಿನ್ನಿನ ತತ್ವಗಳನ್ನು ಬದಲಾಯಿಸಿ ನಿಯೋ ಮಾರ್ಕ್ಸಿಸಂ ಅನುಸರಿಸುತ್ತಿದ್ದಾರೆ. ಚೈನಾದವರು ರಷ್ಯಾದವರನ್ನು ಟೀಕೆ ಮಾಡುತ್ತಾ ಇದ್ದಾರೆ. ಹೀಗೆ ಇದು ಪ್ರಪಂಚದ ಮಾನವನ ಚರಿತ್ರೆಯಲ್ಲಿ ಈ ರೀತಿಯ ತತ್ವ ನಿಷ್ಠೆ ಒಂದೊಂದು ಕಾಲಕ್ಕೆ ಕ್ಷೀಣ ಹೊಂದುವುದು ಸ್ವಾಭಾವಿಕವಾಗಿದೆ ಅದನ್ನು ಎತ್ತಿ ಹಿಡಿಯಬೇಕೆಂದು, ಶ್ರೀಮಾನ್ ಗೋಪಾಲಗೌಡರ ಹಾಗೆ ಬಹಳ ಕಳಕಳಿಯಿಂದ ಹೇಳುವ, ಅನುಕಂಪವನ್ನುಂಟುಮಾಡತಕ್ಕ ವ್ಯಕ್ತಿಗಳು ಇರುತ್ತಾರೆ, ಹುಟ್ಟಿಕೊಳ್ಳುತ್ತಾರೆ ಮುಂದೆ ಬರುವವರು ಇರುತ್ತಾರೆ. ಎಲ್ಲ ಕಾಂಗ್ರೆಸ್ಸಿಗರಲ್ಲೂ ವಿಶ್ವಾಸವೇ ಇಲ್ಲ, ಭಕ್ತಿಯೇ ಇಲ್ಲ, ಕೈ ಬಿಡುತ್ತಾ ಇದ್ದಾರೆ, ಎಲ್ಲರೂ ಬಹಳ ದೊಡ್ಡ ತಪ್ಪು ಮಾಡುತ್ತಾ ಇದ್ದಾರೆ, ಪ್ರಪಂಚವೇ ಕೆಟ್ಟು ಹೋಗಿದೆ ಎನ್ನುವ ರೀತಿಯಲ್ಲಿ ಅಷ್ಟೊಂದು ನಿರಾಶಾವಾದಿಗಳಾಗಿರುವುದು ಬೇಡ ಎಂದು ಅರಿಕೆ ಮಾಡುತ್ತಾ ಇದ್ದೇನೆ. ಕೆಲವರಿಗೆ ಹಾಗೆ ಕಾಣಬಹುದು. ಗೋಪಾಲಗೌಡರಿಗೂ ಕೂಡ ಅವರ ಅನುಕಂಪ ಬಹಳ ಅಪಾರವಾದದ್ದು, ಬಡವರ ಬಗ್ಗೆ, ಕಾರ್ಮಿಕರ ಬಗ್ಗೆ, ಅವರ ಹಿತರಕ್ಷಣೆ ಬಗ್ಗೆ. ಆದರೆ ಕೆಟ್ಟದ್ದು ಒಳ್ಳೆಯದು ಎಲ್ಲಾ ಕಾಲದಲ್ಲೂ ಎಲ್ಲಾ ಸರ್ಕಾರದಲ್ಲೂ ಇದೆ. ಒಂದೇ ಒಂದು ಮಾತು ಅರಿಕೆ ಮಾಡುತ್ತೇನೆ ನಾಳೆ ಗೋಪಾಲ ಗೌಡರಿಗೇ ನಮ್ಮ ದೇಶದಲ್ಲಿ ಒಂದು ಸರ್ಕಾರ ಸ್ಥಾಪನೆ ಮಾಡತಕ್ಕ ಅವಕಾಶ ಸಿಕ್ಕಿ, ತಾವೇ ಸರ್ಕಾರ ಸ್ಥಾಪನೆ ಮಾಡಿ ಎಂದು ಅವರಿಗೆ ಬಿಟ್ಟುಕೊಟ್ಟರೆ ಅವರು 100ಕ್ಕೆ 100ರಷ್ಟು ಪ್ರಾಮಾಣಿಕತೆಯಿಂದ ಸರ್ಕಾರ ರಚನೆ ಮಾಡುತ್ತಾರೆಯೇ ಎಂಬುದನ್ನು ಅವರು ಯೋಚನೆ ಮಾಡಬೇಕ .

ಶ್ರೀ ಎಸ್. ಗೋಪಾಲಗೌಡ.—ಈ ಕಾಲದಲ್ಲಿ 100ಕ್ಕೆ 100 ಪ್ರಾಮಾಣಿಕತೆ ಇಟ್ಟುಕೊಂಡು ಕೆಲಸ ಮಾಡಬೇಕೆನ್ನುವ ಅರಿವು ತಮಗೆ ಇರಬೇಕೆನ್ನುವುದಾದರೂ ತಾವು ಒಪ್ಪುತ್ತೀರಾ ಇಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಆ ಪ್ರಯತ್ನದಲ್ಲಿ ತಮಗೆ ಎಷ್ಟು ಮನಸ್ಸಿದೆಯೋ ನನಗೂ ಅಷ್ಟೇ ಇದೆ. ಆದರೆ ನಿರಂತರವಾಗಿ, ಸದಾ ಎಲ್ಲಾ ಕಾಲದಲ್ಲೂ ಎಲ್ಲಾ ಸರ್ಕಾರಗಳೂ ಅದನ್ನು ಮಾಡತಕ್ಕದ್ದೇ, ಪ್ರಯತ್ನ ಕಡಿಮೆಯಾಗಿದ್ದರೆ ಅದು ಸರಿಯಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳೋಣ. ಆ ಪ್ರಯತ್ನದಲ್ಲಿ ನಾವೂ ಇದ್ದೇವೆ, ತಾವೂ ಇದ್ದೀರಿ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೂ ಆಗಿರಬಹುದು. ಸರ್ಕಾರದ ಕೆಲಸ ಕಾರ್ಯಗಳು ನಡೆಯಬೇಕಾದರೆ ,ಜನಗಳಿಂದಲೇ ನಡೆಯ ಬೇಕಾದ್ದು. ಎಲ್ಲಾ ಕಾಲದಲ್ಲೂ ಜನರು ಒಂದೊಂದು ಹಂತದಲ್ಲಿ ಒಂದೊಂದು ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಇಡೀ ದೊಡ್ಡ ಜನತೆಯ ಒಂದು ಪ್ರಾಮಾಣಿಕತೆಯ ಮಟ್ಟ ಏನಿದೆಯೋ ಅದರ ಮೇಲೆ ಎಲ್ಲಾ ಕೆಲಸ ಕಾರ್ಯಗಳೂ ನಿಂತಿವೆ. ಸರ್ಕಾರದ ಕೆಲಸ ಕಾರ್ಯಗಳೂ ಕೂಡ ಅದೇ ರೀತಿ ಹೋಗುತ್ತಾ ಇರುತ್ತವೆ. Morality of the nation ಏನಿದೆ ಅದರಲ್ಲಿ ಏರು ಇಳಿತ ಆದಹಾಗೆ ಅದು ಸರ್ಕಾರದಲ್ಲಿ ಪ್ರತಿಬಿಂಬಿತವಾಗುತ್ತಾ ಇರುತ್ತದೆ. ಅದನ್ನು ತಾವೂ ಕೂಡ ಒಪ್ಪಿದ್ದೀರಿ. ಆದಕ್ಕೇ ನಿರಾಶಾವಾದಿಗಳಾಗಬೇಕಾದ ಅಗತ್ಯವಿಲ್ಲ. ಪ್ರಯತ್ನ ಮಾಡೋಣ. ಎಲ್ಲಾ ಕೈಬಿಟ್ಟಿದ್ದೇವೆ ಎಂದಾಗಲೀ ಸರ್ಕಾರದ ಪ್ರಯತ್ನ ಮಾಡುತ್ತಿಲ್ಲ ಎಂದಾಗಲೀ ತಾವು ಹೇಳುವುದು ಸರಿಯಲ್ಲ ಎಂದು ನಿವೇದಿಸಿಕೊಳ್ಳುತ್ತಾ ಇದ್ದೇನೆ.

ಈ ವಿಚಾರ ಕಾರ್ಮಿಕರಿಗೆ ಸೇರಿದ ವಿಚಾರ ಒಮ್ಮತದಿಂದ ಒಪ್ಪುವುದಾದರೆ ಜಾರಿಮಾಡುವು ದಕ್ಕೆ ಅಭ್ಯಂತರವಿಲ್ಲ ಮತ್ತು, ಕಾನೂನಿನಲ್ಲೂ ಒಂದು ತಿದ್ದುಪಡಿ ತರಬಹುದು ಎಂದು ಹೇಳುತ್ತಾ ಇದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಹುಟ್ಟು ಹಬ್ಬ, ಮರಣದ ದಿವಸ ಇದು ಅಭಿಪ್ರಾಯದ ಮಾತಲ್ಲ. ರಾಷ್ಟ್ರ ದಿನಾಚರಣೆಯ ಕೆಲಸ ಕಾರ್ಮಿಕರ ಅಭಿಪ್ರಾಯವಲ್ಲ. ರಫರೆಂಡಂ ತೆಗೆದು ಕೊಂಡು ಮಾಡತಕ್ಕ ವಿಷಯವಲ್ಲ. ಮಹಾತ್ಮಾ ಗಾಂಧೀಜಿಯವರ ಬಗ್ಗೆ ಯೋಗ್ಯ ರಾಷ್ಟ್ರನಿಷ್ಠೆ ತೋರಿಸಬೇಕು. ರಜಾ ಕೊಡಬೇಕೆನ್ನುವುದು ಅಭಿಪ್ರಾಯದ ಮಾತಲ್ಲ. ಇದನ್ನು ಅಧ್ಯಕ್ಷರು ಕಾರ್ಮಿಕ ಮಂತ್ರಿಗಳಿಗೆ ವಿಚಾರ ತಿಳಿಸಿ ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ಅದು ಅಭಿಪ್ರಾಯದ ಮಾತೂ ಹೌದು ಎಂದು ನನ್ನ ಭಾವನೆ. ಕಾರಣವೇನೆಂದರೆ ಈಗಾಗಲೇ ಸರ್ಕಾರದ ಘೋಷಣೆ ಹೊರಡಿಸಿದ್ದೇವೆ ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟ ಹಾಗೂ ಸರ್ಕಾರದ ಕೈ ಕೆಳಗಿರುವ ಮತ್ತು ಸರ್ಕಾರಕ್ಕೆ ಸಂಬಂಧಪಟ್ಟ ಆಫೀಸುಗಳಲ್ಲೆಲ್ಲಾ ಈಗಾಗಲೇ ಈ ರಜಾ ದಿನಗಳನ್ನು ನಾವು ಘೋಷಣೆ ಮಾಡಿದ್ದೇವೆ. ಆದರೆ ಇವುಗಳನ್ನು ಈ ಬೇರೆ ಕಾರ್ಮಿಕ ಶಾಖೆಯಲ್ಲಿ ಕಡ್ಡಾಯ ಮಾಡುವುದಕ್ಕೆ ಸಾಧ್ಯ ವಿಲ್ಲವೆಂಬುದನ್ನು ಮನಗಂಡು ಇವುಗಳನ್ನು ಕಡ್ಡಾಯ ಮಾಡುವುದು ಬೇಡ ಎಂತ ಕೈ ಬಿಟ್ಟಿದ್ದೇವೆ...

Mr. SPEAKER.—The Hon'ble Member must remember that employer's Consent also will be necessary.

Sri D. DEVARAJ URS.—I thank you for the suggestion. ಈ ಎರಡು ದಿನ ರಜಗಳನ್ನು ಬಿಟ್ಟರೆ ಇನ್ನೂ 5 ದಿನಗಳ ರಜವಿರುತ್ತೆ. ಇದು ಅವರಿಗೆ ಸೂಕ್ತಕಂಡಹಾಗೆ ಉಪ ಯೋಗಿಸಬಹುದು. ಆಯಾಯ ಫ್ಯಾಕ್ಟರಿಯಲ್ಲಿರತಕ್ಕ ಜನರೂ—ಆ ಫ್ಯಾಕ್ಟರಿ ಮಾಲೀಕರೂ ಈ ಅಕ್ಟೋಬರ್ 2ನೇ ತಾರೀಖನ್ನೂ ಮತ್ತು ಆಗಸ್ಟ್ 31ನೇ ತಾರೀಖನ್ನೇ ರಜಾದಿನಗಳನ್ನಾಗಿ ಬಳಸ ಬೇಕೆಂದು ಒಪ್ಪಿಕೊಂಡರೆ ಆಗ ಅದರಲ್ಲಿ ತಪ್ಪೇನಿದೆ? ಆದರೆ ಯಾರ್ಯಾರಿಗೆ ಯಾವ್ಯಾವ ದಿನ ರಜಾ ಬಳಸಬೇಕೆಂಬ ಇಷ್ಟವಿದೆಯೋ ಅದರ ಪ್ರಕಾರ ಅವರು ಮಾಡಿಕೊಳ್ಳಬಹುದು.

ಶ್ರೀ ಎಸ್. ಗೋಪಾಲಗೌಡ.—ಈ ವಿಚಾರದಲ್ಲಿ ಯಾರೂ ಭಿನ್ನಾಭಿಪ್ರಾಯ ಪಡುವುದಿಲ್ಲ—

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ವಿವರಣೆಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ಸಿಬ್ಬಂದಿ ಬಗ್ಗೆ ಮಾನ್ಯ ಸ್ನೇಹಿತರು ಒಂದು ಮಾತನ್ನು ಹೇಳಿ ದ್ದಾರೆ. ಈ ವಿಚಾರದಲ್ಲಿ ಫ್ಯಾಕ್ಟರಿಗಳ ಆಕ್ಟು, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಮತ್ತು ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ ಎಂಥ ಆಕ್ಟುಗಳನ್ನು ಮಾಡಿ ಇವುಗಳನ್ನು ಜಾರಿಗೆ ಕೊಡಲು ನೇಮಿಸಿರತಕ್ಕ ಇನ್ಸ್‌ಪೆಕ್ಟರುಗಳ ಸಂಖ್ಯೆ ಈಗ ಸ್ವಲ್ಪ ಕಡಮೆ ಇದೆ—ಎಂಬ ಅಂಶವನ್ನು ಈ ಹಿಂದೆಯೇ ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ. ಶ್ರೀ ಗೋಪಾಲಗೌಡರು ಹೇಳುವಂತೆ ಈ ಕಾನೂನನ್ನು ಒಳ್ಳೇ ಫಲಕಾರಿಯಾಗಿ ಹಾಗೂ ತೃಪ್ತಿಕರವಾಗಿ ಜಾರಿಗೆ ತರಲು ಸ್ವಲ್ಪ ಕಷ್ಟವಿದೆ. ಆದರೆ ಶ್ರೀ ಗೋಪಾಲಗೌಡರು ಹೇಳುವಂತೆ ಅಪ್ರಮಾಣಿಕರಿರಬಹುದು. ಆದರೆ ಅವರು ಒಂದು ಕೆಟ್ಟ ಉದ್ದೇಶವಿಟ್ಟುಕೊಂಡೇ ಈ ರಜಾ ದಿನಗಳನ್ನು ಕೆಲಸದ ದಿನಗಳನ್ನಾಗಿ ಇಟ್ಟುಕೊಳ್ಳುತ್ತಾರೆ ಎಂತ ಹೇಳಿರತಕ್ಕದ್ದು ಅಷ್ಟು ಸರಿಯಾದ್ದಲ್ಲ. ಈ ಇನ್ಸ್‌ಪೆಕ್ಟರುಗಳ ಸಂಖ್ಯೆ ಕಡಮೆಯಿರುವಾಗ

(ಶ್ರೀ ಡಿ. ದೇವರಾಜ ಅರಸ್)

ಮತ್ತು ಈ ಕಾರ್ಯ ಕ್ಷೇತ್ರ ವಿಶಾಲವಾಗಿರುವಾಗ ಈ ಕೆಲಸವನ್ನು ತೃಪ್ತಿಕರವಾಗಿ ಮಾಡುವುದು ಸ್ವಲ್ಪ ಕಷ್ಟವೇ. ಆದಾಗ್ಯೂ ಎಲ್ಲೆಲ್ಲಿ ಎಷ್ಟೆಷ್ಟು ಸಾಧ್ಯವಿದೆಯೋ ಅಷ್ಟನ್ನೂ ಇರತಕ್ಕ ಇನ್ಸ್‌ಪೆಕ್ಟರು ಗಳಿಂದಲೇ ಈ ಕೆಲಸಗಳನ್ನು ಕಡ್ಡಾಯವಾಗಿ ಸರ್ಕಾರದ ವತಿಯಿಂದ ಮಾಡಿಸುತ್ತಿದ್ದೇವೆ.

ಇನ್ನು ಕೆಲವು ಮಾನ್ಯ ಸದಸ್ಯರು ವ್ಯವಸಾಯ ಕ್ಷೇತ್ರದಲ್ಲಿರತಕ್ಕ ಕಾರ್ಮಿಕರಿಗೂ ಈ ಪರಿಹಾರ ಗಳು ದೊರೆಯಬೇಕೆಂದು ಹೇಳಿದ್ದಾರೆ. ಆದರೆ ಈ ರಜಾ ದಿನಗಳು ಎಲ್ಲ ವರ್ಗದ ಕಾರ್ಮಿಕರಿಗೂ ಅನ್ವಯಿಸುತ್ತವೆಯೇ ಅಥವಾ ಇಲ್ಲವೇ ಎಂಬುದನ್ನು ನಾವಿನ್ನು ಪರಿಶೀಲನೆ ಮಾಡಬೇಕಾಗಿದೆ. ಆದರೆ ಇದೆಲ್ಲ ಕೆಲವು factory Actಗಳಿಗೆ ಅನ್ವಯಿಸದೆ ಇರಬಹುದು. ಆದರೆ ಈಗ ಒಂದು ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ಜಮೀನುಗಳಲ್ಲಿ ಕೆಲಸಮಾಡತಕ್ಕ ಕಾರ್ಮಿಕರಿಗೇನೋ ಈ ಕಾನೂನನ್ನು ಅನ್ವಯಮಾಡಬಹುದು. ಆದರೆ ಯಾರೋ ಒಬ್ಬಾತ ಒಂದು ಹಳ್ಳಿಯಲ್ಲಿ ನಾಲ್ಕಾರು ಜನ ಕೂಲಿ ಆಳುಗಳನ್ನಿಟ್ಟುಕೊಂಡು ಕೆಲಸ ಮಾಡಿಸುತ್ತಿರುವ ಕಡೆಯಲ್ಲೂ ಈ ಕಾನೂನನ್ನು ಅನ್ವಯ ಮಾಡಬೇಕೆಂದರೆ ಅದು ಸಾಧ್ಯವಿಲ್ಲದ ಮಾತು.

ಶ್ರೀ ಎಸ್. ಗೋಪಾಲಗೌಡ.—ಪಂಚಾಯ್ತಿಗಳಿಗೆ ಅಧಿಕಾರ ಕೊಡಿ. ರಾಷ್ಟ್ರೀಯ ರಜಾ ದಿನಗಳನ್ನು ಅಲ್ಲಿಯೂ ಆಚರಿಸುವಂತೆ ಮಾಡಿ. ಈಗ ಏನೋ ಅವರು ವೇಗ್ ಆಗಿ ಬರೆದು ಕೊಂಡಿದ್ದರೂ ಕಾಲಕ್ರಮೇಣ ಸರಿಯಾಗೇ ಜಾರಿಗೆ ಬರಬಹುದು.

Mr. SPEAKER.—The Hon'ble Member is forgetting the heading of the Bill. "Mysore Industrial Establishment..." But it is a suggestion for further action and not under this Bill. It is a very good suggestion for action outside and not under this Bill.

ಶ್ರೀ ಡಿ. ದೇವರಾಜ ಅರಸ್.—ಈ ಸಲಹೆಗಳನ್ನೆಲ್ಲ ಬೇರೆ ಸಂದರ್ಭದಲ್ಲಿ ಪರಿಶೀಲನೆಮಾಡೋಣ. ಈ ಬಿಲ್ಲಿನಲ್ಲಂತೂ ಇದು ಸಾಧ್ಯವಿಲ್ಲ ಅನ್ನುವುದನ್ನು ಈಗ ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಇನು ಈ ಡಿಫೆನಿಷನ್ ವಿಚಾರದಲ್ಲಿ ಸ್ವಲ್ಪ ಅನುಮಾನ ಬಂದಿದೆ ಎಂದು ಶ್ರೀ ಐಕ್ಯರವರು ಹೇಳಿದರು. ಆದರೆ ಅಂಥಾ ಯಾವ ಅನುಮಾನಕ್ಕೂ ಇಲ್ಲಿ ಅವಕಾಶವಿಲ್ಲ. ಅದನ್ನು ಅವರು ಸರಿಯಾಗಿ ಓದಿದರೆ ಗೊತ್ತಾಗುತ್ತದೆ.

ಶ್ರೀ ಸಂಜೀವನಾಥ ಐಕ್ಯ.—ಹಾಗೆ ಓದಿದ್ದರಿಂದಲೇ ಆ ಅನುಮಾನ ಬಂದಿದ್ದು.

ಶ್ರೀ ಡಿ. ದೇವರಾಜ ಅರಸ್.—ಈ ದಿವಸ ವೇಜಸ್ ವಿಚಾರದಲ್ಲಿ ಮದ್ರಾಸ್ ಆಕ್ಟಿನಲ್ಲಿ ಏನಿದೆಯೋ ಅದನ್ನೇ ನಾವು ಇಲ್ಲಿ ಸೇರಿಸಿದ್ದೇವೆ. ಇದು ಸೆಲೆಕ್ಟ್ ಸಮಿತಿ ಮುಂದೆ ಹೋಗಿ ಅಲ್ಲಿ ಬೇರೆ ಚರ್ಚೆ ಆಗಿದೆ. ಈಗ ಇರತಕ್ಕದ್ದೇ ಸರಿ ಎಂತ ಅವರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅದನ್ನೇ ಈ ಬಿಲ್ಲಿನಲ್ಲಿ ಈಗ ಅಳವಡಿಸಿದ್ದೇವೆ. ಯಾವ ಅನುಮಾನಕ್ಕೂ ಈಗ ಅವಕಾಶವಿಲ್ಲ ಎಂತ ಹೇಳುತ್ತೇನೆ.

ಇನ್ನು ಪೆನಾಲ್ಟಿ ವಿಚಾರ ಚರ್ಚೆಗೆ ಬಂದಿತ್ತು. ಈ ಬಗ್ಗೆ ಈಗ ಹೇಳಿರತಕ್ಕ ಪೆನಾಲ್ಟಿಯೇ ಸಾಕು, ಇದನ್ನು ಇನ್ನೂ ಹೆಚ್ಚು ಮಾಡುವುದು ಬೇಡ ಎನ್ನತಕ್ಕ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಲೈನಿನಲ್ಲಿ ದೊಡ್ಡ ದೊಡ್ಡ ಫ್ಯಾಕ್ಟರಿಗಳೂ ಇವೆ, ಸಣ್ಣಪುಟ್ಟ ಷಾಪುಗಳು ಇರುತ್ತವೆ. ಈ ದಿವಸ ರಾಜ್ಯದ ಮೂಲೆ ಮೂಲೆಯಲ್ಲೆಲ್ಲಾ ಹರಡಿರುತ್ತವೆ. ಅವುಗಳಿಗೆಲ್ಲ ಇದು ಅನ್ವಯಿಸುವ ಹಾಗೆ ಮಾಡಲಾಗಿದೆ. ಅವರಿಗೆ ಸಾಕಷ್ಟು ಈ ಕಾನೂನು ಪ್ರಚಾರವಾಗಿರುವುದಿಲ್ಲ. ಮೇಲಾಗಿ ಕಾನೂನು ತಿಳುವಳಿಕೆ ಇಲ್ಲದೆ ತಪ್ಪನ್ನು ಮಾಡತಕ್ಕವರೂ ಇರುತ್ತಾರೆ. ಮುಂದೆ ಬೇಕಾದರೆ ಇದನ್ನು ಹಂತ ಹಂತವಾಗಿ ಮಾಡ ಬಹುದು. ಮೊದಲೇ ಇದನ್ನು ಒಂದು ದೊಡ್ಡ ಪೆಡಂಭೂತವನ್ನಾಗಿ ಮಾಡಬಾರದು ಎಂಬ ದೃಷ್ಟಿಯಿಂದ ಈಗ ಮೊದಲನೆ ಹಂತದಲ್ಲಿ 25 ರೂ. ಗಳನ್ನು 2ನೇ ಹಂತದಲ್ಲಿ ಇನ್ನೂ ಹೆಚ್ಚಿನ ಶಿಕ್ಷೆ ಮಾಡಬಹುದು ಎಂತ ಈಗ ನಮೂದಾಗಿದೆ. ಈ ಶಾಸನವನ್ನು ನಾವು ಜಾರೀ ಮಾಡುವ ಕಾಲದಲ್ಲಿ ಯಾರಾದರೂ ಈ ಕಾನೂನನ್ನು ಮುರಿಯಬೇಕೆಂದು ಉದ್ದೇಶಪಟ್ಟು ಪ್ರಯತ್ನಮಾಡಿ ಕೋರ್ಟಿಗೆ ಹೋದರೂ 25 ರೂ. ಗಳ ಬದಲು 250 ರೂ. ಗಳ ಜುಲ್ಮಾನೆ ತಾನೆ ಅವರು ಹಾಕತಕ್ಕದ್ದು, ಆಯಿತು. ಅದನ್ನು ಕೊಟ್ಟರೆ ನಾವು ಮಾಮೂಲಾಗಿ ಕೆಲಸ ತೆಗೆದುಕೊಳ್ಳುವಂತೆ ಕೆಲಸ ಮಾಡಿಸಿ ಕೊಳ್ಳುತ್ತ ಫಾಯಿದೆ ಹೊಂದೋಣ ಎನ್ನತಕ್ಕ ಸಂದರ್ಭಗಳು ಸರ್ಕಾರಕ್ಕೆ ಕಂಡು ಬಂದಾಗ ಇದಕ್ಕೆ ಒಂದು ಅಮೆಂಡ್‌ಮೆಂಟ್ ಮಾಡಲು ಯಾವ ತೊಂದರೆಯೂ ಇರುವುದಿಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಒಟ್ಟಿನಲ್ಲಿ ನಾನು ಇಷ್ಟು ಹೇಳುತ್ತೇನೆ ಸ್ವಾಮಿ. ಸರ್ವ ಸಮರ್ಪಕವಾದ ಮತ್ತು ಇನ್ನು ಮುಂದೆ ಯಾರೂ ಏನೂ ಮಾಡದೇ ಇರುವ ರೀತಿಯಲ್ಲಿ ಕಾನೂನು ಮಾಡುವುದಕ್ಕೆ ಸಾಧ್ಯವಿಲ್ಲ. ಹೊಸ ಹೊಸ ಕಾನೂನುಗಳು ಬರುತ್ತಿರುವಾಗ, ನಮ್ಮ ಅನುಭವದಲ್ಲಿ ಯಾವುವಾದರೂ ತೊಂದರೆಗಳುಂಟಾದರೆ ಅವೆಲ್ಲವನ್ನೂ ಮುಂದೆ ಅಳವಡಿಸುವುದಕ್ಕೆ ಅವಕಾಶವಿದೆ ಎಂದು ಹೇಳಿ, ಮಾನ್ಯ ಸದಸ್ಯರು ಈ ಮಸೂದೆಗೆ ಬೆಂಬಲ ಕೊಟ್ಟಿದ್ದಕ್ಕಾಗಿ ಅಭಿನಂದಿಸಿ ಇದನ್ನು ಒಪ್ಪಬೇಕೆಂದು ಪ್ರಾರ್ಥಿಸುತ್ತೇನೆ.

Sri SANJEEVANATH AIKALA.—Whether the working journalists are included in this, because in most of the cases, journalists are not considered as employees in industries ?

Sri D. DEVARAJ URS.—That will be considered.

Mr. SPEAKER.—The question is:

"That the Mysore Industrial Establishments National and Festival Holidays) Bill, 1962, as passed by the Legislative Council, be taken into consideration."

The motion was adopted.

Mr. SPEAKER.—Clauses 2 to 13. The question is :

"That clauses 2 to 13, both inclusive, stand part of the Bill"

The motion was adopted.

Clauses 2 to 13 both inclusive, were added to the Bill.

Mr. SPEAKER.—The question is :

"That clause 1 the Title and the Preamble stand part of the Bills".

The motion was adopted.

Clause 1, the Title and the Preamble were added to the Bill.

Motion to pass.

Sri D. DEVARAJ URS.—Sir, I beg to move :

"That the Mysore Industrial Establishments (National and Festival Holidays) Bill, 1962, as passed by the Legislative Counci be passed".

Mr. SPEAKER.—The question is:

"That the Mysore Industrial Establishments (National and Festival Holidays) Bill, 1962, as passed by the Legislative Council, be passed"

The motion was adopted.